www.divinegen.org

# ದೇವರ ಸ್ವರ

ದೇವ ಜನರಿಂದ ... ದೇವ ಜನರಿಗಾಗಿ

ಸಂಪುಟ - 8 ಸಂಚಿಕೆ - 7 ಜುಲೈ 2012
Volume : VIII Issue : VII July 2012

Editor, Publisher, Printer
& Owned by :
**Sunil John D'souza**
S/o Sri Joseph D'souza
Bethel Faith Home
Yesupura, Innanje Village,
Shankarpura, **Udupi**


Printed at :
**Prakash Offset Printers,**
Plot No. 164, Industrial Area,
Baikampady,
**Mangalore - 575003.**

Published at :
**Devine Generation Ministries**
Bethel Church Trust,
Bethel Church Road,
Yesupura, Innanje Village,
Shankarpura Post,
Udupi - 574 115.

## ಒಳ ಪುಟಗಳಲ್ಲಿ

1. ಪ್ರಕಟಣೆ
2. ಬಲ ಹೊಂದಿಕೊ – ವಯಸ್ಕರ ಸ್ವರ
3. ಪ್ರಶ್ನೋತ್ತರಗಳ ಸ್ವರ
4. ಆರೋಗ್ಯ ಸ್ವರ
5. ಬೈಬಲ್ ಕ್ವಿಜ್
6. ಪುನರ್‌ಸ್ಥಾಪನೆ
7. ಮರುಭುಂಯ್ತ್ ಇಶ್ಮಾಯೇಲ್
8. ಅನಾಥರ ಸ್ವರ
9. ಹಳೆಯ ಒಡಂಬಡಿಕೆಯ ಪುಸ್ತಕಗಳ ಸಂಗ್ರಹ
10. ಸಮರ್ಪಣೆಯ ಅಗತ್ಯವಿದೆ
11. ಪ್ರಾರ್ಥನಾ ಮನವಿಗಳು
12. ಸ್ಥಳೀಯ ಮತ್ತು ವಿದೇಶ ಸುದ್ಧಿ
13. ರೂತಳ ಪುಸ್ತಕ

## ಸಂಪಾದಕರ ಲೇಖನಿಯಿಂದ . . .



ಕರ್ತನಾದ ಯೇಸುಕ್ರಿಸ್ತನ ಪರಿಶುದ್ಧ ನಾಮದಲ್ಲಿ ದೇವರ ಸ್ವರ ಮಾಸ ಪತ್ರಿಕೆಯ ಪ್ರಿಯ ವಾಚಕರೆಲ್ಲರಿಗೂ ನನ್ನ ವಂದನೆಗಳು. ನಿಮ್ಮೆಲ್ಲರ ಪ್ರಾರ್ಥನೆ ಪ್ರೋತ್ಸಾಹ ಹಾಗೂ ಸಹಕಾರದಿಂದ ದೇವರ ಸ್ವರ ಮಾಸ ಪತ್ರಿಕೆಯನ್ನು ಆಶೀರ್ವಾದದೊಂದಿಗೆ ಮುಂದುವರಿಸಲು ಸಾಧ್ಯವಾಗಿದೆ. ಸಾಧ್ಯವಾದಷ್ಟು ಈ ಪತ್ರಿಕೆಯನ್ನು ಬೇರೆಯವರಿಗೆ ಪರಿಚಯಿಸಿರಿ. ನಿಮ್ಮ ಸ್ನೇಹಿತರ ಅಥವಾ ಪರಿಚಯಸ್ಥರ ಪರವಾಗಿ ವಾರ್ಷಿಕ ಚಂದಾ ತುಂಬಿ ಅವರು ಕೂಡ ದೇವರ ವಾಕ್ಯವನ್ನು ಹೆಚ್ಚಾಗಿ ತಿಳಿದುಕೊಳ್ಳಲು ನೀವು ಸಹಾಯ ಮಾಡಬಹುದು. ತಮ್ಮೆಲ್ಲರಲ್ಲಿ ಇನ್ನೊಂದು ವಿನಂತಿ ಏನೆಂದರೆ ವಾರ್ಷಿಕ ಚಂದಾ ಹಣವನ್ನು ಕಟ್ಟಲು ಬಾಕಿ ಇದ್ದರೆ ದಯಮಾಡಿ ಕಟ್ಟಿ ನಮ್ಮ ಸೇವೆಗೆ ಸಹಾಯಮಾಡಿರೆಂದು ಕೇಳಿಕೊಳ್ಳುತ್ತೇನೆ.

ದೇವರ ಸ್ವರ ಮಾಸ ಪತ್ರಿಕೆಯ ಮೂಲಕವಾಗಿ ಕೇವಲ ಭಾರತ ದೇಶದಲ್ಲಿ ಮಾತ್ರವಲ್ಲ, ವಿದೇಶದಲ್ಲಿಯೂ ಅನೇಕರು ಆಶೀರ್ವಾದ ಹೊಂದಿಕೊಂಡಿದ್ದಾರೆ. ನಮ್ಮಿಂದ ಸಾಧ್ಯವಾದಷ್ಟು ಒಳ್ಳೆಯ ರೀತಿಯಲ್ಲಿ ನಿಮಗೆ ದೇವರ ವಾಕ್ಯವನ್ನು ಸಿದ್ಧಪಡಿಸಿ ಕಳುಹಿಸುತ್ತೇವೆ. ಇನ್ನೇನು ಸಲಹೆ ಸೂಚನೆ, ತಿದ್ದುಪಡಿಯನ್ನು ಕೊಡಲು ತಾವುಗಳು ಬಯಸಿದರೆ ಸಂತೋಷದಿಂದ ಸ್ವೀಕರಿಸುತ್ತೇವೆ.

**"ದೇವರ ವಾಕ್ಯವು ಸಜೀವವಾದದ್ದು, ಕಾರ್ಯಸಾಧಕವಾದದ್ದು, ಯಾವ ಇಬ್ಬಾಯಿಕತ್ತಿಗಿಂತಲೂ ಹದವಾದದ್ದು, ಪ್ರಾಣಆತ್ಮಗಳನ್ನೂ ಕೀಲುಮಜ್ಜೆಗಳನ್ನೂ ವಿಭಾಗಿಸುವಷ್ಟು ಮಟ್ಟಿಗೂ ತೂರಿಹೋಗುವಂಥದು, ಹೃದಯದ ಆಲೋಚನೆಗಳನ್ನೂ ಉದ್ದೇಶಗಳನ್ನೂ ವಿವೇಚಿಸುವಂಥದು ಆಗಿದೆ"** (ಇಬ್ರಿ. 4:12).

**"ಆತನು [ದೂತನನ್ನೋ ಎಂಬಂತೆ] ತನ್ನ ವಾಕ್ಯವನ್ನು ಕಳುಹಿಸಿ ಅವರನ್ನು ಗುಣಪಡಿಸಿದನು; ಸಮಾಧಿಗೆ ಸೇರದಂತೆ ಮಾಡಿದನು"** (ಕೀರ್ತ. 107:20).

*ಹಿರಿಯ ಸಂಪಾದಕ*

**ಪಾಸ್ಟರ್ ಸುನಿಲ್ ಜಾನ್ ಡಿ'ಸೋಜಾ**

# ಪ್ರಕಟಣೆ

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

## ಪುನರುತ್ಥಾನ ಹೊಂದಿದ ಕ್ರಿಸ್ತನ ಸಂದೇಶ

1) ಆದರಣೆ ಸಂತೈಸುವಿಕೆಯನ್ನುಂಟು ಮಾಡುವ ಸಂದೇಶ (ಯೋಹಾ. 20:15)

2) ಆತನ ಸಾನಿಧ್ಯದ ವಾಗ್ದಾನದ ಸಂದೇಶ (ಮತ್ತಾ. 28:20).

3) ಪ್ರೀತಿಯ ಕುರಿತಾದ ಸಂದೇಶ (ಯೋಹಾ. 21:15).

4) ನಂಬಿಕೆಯ ಕುರಿತಾದ ಸಂದೇಶ (ಯೋಹಾ. 20:29).

5) ಕ್ಷಮಾಪಣೆಯ ಸಂದೇಶ (ಯೋಹಾ. 20:22–23).

6) ಪವಿತ್ರಾತ್ಮನ ಸ್ನಾನದ ಕುರಿತಾದ ಸಂದೇಶ (ಲೂಕ. 24:49, ಅ.ಕೃ. 1:4–5).

7) ಅದ್ಭುತಗಳ ಕುರಿತಾದ ಸಂದೇಶ (ಮಾರ್ಕ. 16:17–18).

8) ಆತ್ಮ ರಕ್ಷಣೆಯ ಕುರಿತ ಸಂದೇಶ (ಮಾರ್ಕ. 16:16).

9) ಆಜ್ಞೆಯಿಂದ ಕೂಡಿದ ಸಂದೇಶ (ಮಾರ್ಕ. 16:15).

10) ಆತ್ಮೀಕ ಅಧಿಕಾರದ ಸಂದೇಶ (ಮತ್ತಾ. 28:15).

1) **ಹಳೆ ಒಡಂಬಡಿಕೆಯ ಭಕ್ತರ ಪುನರುತ್ಥಾನ** (ಯೆಶಾ. 26:19, ಮತ್ತಾ. 27:52–56) **"ಮೃತರಾದ ನಿನ್ನ ಜನರು ಬದುಕುವರು, ನನ್ನವರ ಹೆಣಗಳು ಜೀವದಿಂದೇಳುವವು, ಮಣ್ಣಿನಲ್ಲಿ ಪವಳಿಸಿರುವವರೇ, ಎಚ್ಚತ್ತು ಹರ್ಷಧ್ವನಿಗೈಯಿರಿ! ಯೆಹೋವನೇ, ನೀನು ಸುರಿಯುವ ಇಬ್ಬನಿಯು ಜ್ಯೋತಿರ್ಮಯವಾದದ್ದು, ಭೂಮಿಯು ಸತ್ತವರನ್ನು ಹೊರಪಡಿಸುವದು".** (ಯೆಶಾ. 26:19) ಪುನರುತ್ಥಾನದ ಕುರಿತು ಹಳೆ ಒಡಂಬಡಿಕೆಯಲ್ಲಿ ಅತೀ ಪ್ರಾಮುಖ್ಯವಾದ ವಾಕ್ಯವೇ ಮೇಲಿನ ವಾಕ್ಯವಾಗಿದೆ. ಈ ವಾಕ್ಯವು ಮನುಷ್ಯನ ಆತ್ಮದ ಕುರಿತು ಅಲ್ಲ ಶರೀರದ ಪುನರುತ್ಥಾನದ ಕುರಿತು ಹೇಳುತ್ತಿದೆ. ದಾನಿಯೇಲನ ಗ್ರಂಥದಲೂ ಇದರ ವಿಷಯವಾಗಿ **"ದೂಳಿನ ನೆಲದೊಳಗೆ ದೀರ್ಘನಿದ್ರೆ ಮಾಡುವವರಲ್ಲಿ ಅನೇಕರು ಎಚ್ಚೆತ್ತು ಕೆಲವರು ನಿತ್ಯಜೀವವನ್ನು, ಕೆಲವರು ನಿಂದನೆ ನಿತ್ಯ ತಿರಸ್ಕಾರಗಳನ್ನು ಅನುಭವಿಸುವರು"** (ದಾನಿ. 12:2). ಮಾನವನ ವ್ಯಕ್ತಿತ್ವದಲ್ಲಿ ಅತೀ ಪ್ರಾಮುಖ್ಯವಾದದ್ದೇ ದೇಹ. ದೇಹರಹಿತ ಮನುಷ್ಯನನ್ನು ಚಿಂತಿಸುವುದು ಅಸಾಧ್ಯ. ಮನುಷ್ಯನ ದೇಹದೊಳಗಿರುವ ಆತ್ಮವು ಪರಲೋಕದಲ್ಲಿರುವ ಮೇಲುಗಳನ್ನಾಗಲಿ, ನರಕದ ಶಿಕ್ಷೆಯನ್ನಾಗಲಿ ಅನುಭವಿಸುತ್ತದೆ. ದೇವರ ಆಜ್ಞೆಯಲ್ಲಿ ಮನುಷ್ಯನ ವ್ಯಕ್ತಿತ್ವದ ಆತ್ಮ ಹಾಗೂ ದೇಹಗಳೆರಡು ಪುನರುತ್ಥಾನ ಗೊಳ್ಳುತ್ತದೆಂದು ಯೆಹೂದ್ಯರು ನಂಬಿದ್ದರು.

ಕರ್ತನಾದ ಯೇಸುಕ್ರಿಸ್ತನು ಶಿಲುಬೆಯಲ್ಲಿ ಪ್ರಾಣಕೊಟ್ಟ ನಂತರ ಅನೇಕ ಸಮಾಧಿಗಳು ತೆರೆದವು ಆದರೆ ಯೇಸು ಕ್ರಿಸ್ತನು ಹೂಣಲ್ಪಟ್ಟು ಮೂರನೆಯ ದಿನದಲ್ಲಿ ಪುನರುತ್ಥಾನನಾಗಿ ಎದ್ದು ಬಂದ ಮೇಲೆ ಹಳೆ ಒಡಂಬಡಿಕೆಯ ಭಕ್ತರ ದೇಹಗಳು ಎದ್ದವು (ಪುನರುತ್ಥಾನಗೊಂಡರು). **"ಭೂಮಿಯು ಅದರಿತು; ಬಂಡೆಗಳು ಸೀಳಿಹೋದವು; ಸಮಾಧಿಗಳು ತೆರೆದವು; ನಿದ್ದೆಹೋಗಿದ್ದ ಅನೇಕ ಭಕ್ತರ ದೇಹಗಳು ಎದ್ದವು; ಮತ್ತು ಆತನು ಎದ್ದ ಮೇಲೆ ಸಮಾಧಿಗಳೊಳಗಿಂದ ಹೊರಗೆ ಬಂದು ಪರಿಶುದ್ಧ ಪಟ್ಟಣದೊಳಕ್ಕೆ ಹೋಗಿ ಅನೇಕರಿಗೆ ಕಾಣಿಸಿಕೊಂಡರು"** (ಮತ್ತಾ. 27:52–53). ಈ ಹಳೆ ಒಡಂಬಡಿಕೆಯ ಭಕ್ತರನ್ನೇ ಕರ್ತನಾದ ಯೇಸು ಕ್ರಿಸ್ತನು ಪುನರುತ್ಥಾನನಾಗಿ ಎದ್ದ ಮೇಲೆ (ಹಳೆ ಒಡಂಬಡಿಕೆಯ ಪರದೈಸು ಅಂದರೆ ಭೂಮಿಯ ಕೆಳಗಿನ ಮೊದಲ ಭಾಗದಲ್ಲಿದ್ದ ಸ್ಥಳವನ್ನು ಪರಲೋಕಕ್ಕೆ ವರ್ಗಾಯಿಸಿದನು).

**"ಆದರೆ ಕ್ರಿಸ್ತನು ನಮ್ಮಲ್ಲಿ ಒಬ್ಬೊಬ್ಬನಿಗೆ ಅನುಗ್ರಹಿಸಿದ ಪ್ರಕಾರವೇ ಅವನವನಿಗೆ ಕೃಪಾವರವು ದೊರಕಿದೆ. ಆದದರಿಂದ ಆತನು ಉನ್ನತ ಸ್ಥಾನಕ್ಕೆ ಏರಿದಾಗ ತಾನು ಜಯಿಸಿದ್ದ ಬಹು ಜನರನ್ನು ಸೆರೆಹಿಡಿದುಕೊಂಡು ಹೋಗಿ ಮನುಷ್ಯರಿಗೆ ದಾನಗಳನ್ನು ಮಾಡಿದನು"** (ಎಫೆ.4:7–8). (ಈಗ ಭೂಮಿಯ ಕೆಳಗಿನ ಭಾಗವಾದ 4ನೇ ಪರದೈಸುವು ಅಂದರೆ ಹಳೆ ಒಡಂಬಡಿಕೆಯ ಭಕ್ತರ ಆತ್ಮಗಳಿದ್ದ ಸ್ಥಳವು ಖಾಲಿಯಾಗಿದೆ).

2) **3ನೆಯ ಪುನರುತ್ಥಾನ :– "ಈ ಸಾಕ್ಷಿಗಳ ಶವಗಳು ಮಹಾ ಪಟ್ಟಣದ ಬೀದಿಯಲ್ಲಿ ಬಿದ್ದಿರುವವು. ಆ ಪಟ್ಟಣಕ್ಕೆ ಗೂಢಾರ್ಥವಾಗಿ ಸೊದೋಮ್ ಎಂತಲೂ ಐಗುಪ್ತ ಎಂತಲೂ ಹೆಸರುಗಳುಂಟು; ಇವರ ಒಡೆಯನು ಸಹ ಅಲ್ಲಿಯೇ ಶಿಲುಬೆಗೆ ಹಾಕಲ್ಪಟ್ಟನು. ಸಕಲ ಪ್ರಜೆ ಕುಲ ಭಾಷೆ ಜನಾಂಗಗಳಿಗೆ ಸೇರಿದವರು ಈ ಸಾಕ್ಷಿಗಳ ಶವಗಳನ್ನು ಮೂರುವರೆ ದಿನಗಳವರೆಗೂ ನೋಡುತ್ತಾ**

ನಾನೇ ನಿಮ್ಮ ಜೊತೆಯಲ್ಲಿ ಬಂದು ನಿಮಗೆ ವಿಶ್ರಾಂತಿಯನ್ನು ಉಂಟು ಮಾಡುವೆನು
(ವಿಮೋ. 33:14).

**ಇರುವರು; ಅವುಗಳನ್ನು ಸಮಾಧಿಯಲ್ಲಿ ಇಡಗೊಡಿಸುವದಿಲ್ಲ. ಈ ಇಬ್ಬರು ಪ್ರವಾದಿಗಳು ಭೂನಿವಾಸಿಗಳನ್ನು ಪೀಡಿಸಿದ್ದರಿಂದ ಇವರು ಸತ್ತದ್ದಕ್ಕೆ ಭೂನಿವಾಸಿಗಳು ಸಂತೋಷಿಸಿ ಸಂಭ್ರಮಗೊಂಡು ಒಬ್ಬರಿಗೊಬ್ಬರು ಉಡುಗೋರೆಗಳನ್ನು ಕಳುಹಿಸುವರು. ಮೂರುವರೆ ದಿನಗಳಾದ ಮೇಲೆ ದೇವರಿಂದ ಜೀವಾತ್ಮ ಬಂದು ಆ ಶವಗಳಲ್ಲಿ ಹೋಗಲು ಅವು ಕಾಲೂರಿ ನಿಂತವು. ಅವರನ್ನು ನೋಡಿದವರಿಗೆ ಮಹಾಭಯವು ಹಿಡಿಯಿತು"** (ಪ್ರಕ. 11:8–12).

ಲೋಕ ಚರಿತ್ರೆಯ ಅತೀ ಕಠಿಣವಾದ ಸಮಯದಲ್ಲಿಯೇ ಈ ಇಬ್ಬರು ಸಾಕ್ಷಿಗಳು ಸೇವೆಯನ್ನು ಆರಂಭಿಸುವುದು ಕ್ರಿಸ್ತನು ತನ್ನ ಮದಲಗಿತ್ತಿ ಸಭೆಯೊಂದಿಗೆ ವಿವಾಹ ಸಮಾರಂಭ ಹಾಗೂ ಔತಣಕೂಟಕ್ಕಾಗಿ ಪರಲೋಕಕ್ಕೆ ಏರಿಹೋಗುವನು. ಆಗ ಭೂಮಿಯಲ್ಲಿ ದೈವೀಕ ಸಂದೇಶವನ್ನು ಸಾರುವುದಕ್ಕೂ ಪ್ರವಾದಿಸುವುದಕ್ಕೂ ದೇವರಿಂದ ನಿಯಮಿತರಾದ ಇಬ್ಬರು ಸಾಕ್ಷಿಗಳು ಯೆರುಸಲೇಮಿಗೆ ಆಗಮಿಸುತ್ತಾರೆ. ಈ ಸಮಯದಲ್ಲಿ ಯೆರುಸಲೇಮ್ ಪಟ್ಟಣವು ಕ್ರಿಸ್ತವಿರೋಧಿಯಿಂದ ಸಂಪೂರ್ಣವಾಗಿ ನಾಶವಾಗಿರುತ್ತದೆ. ಪ್ರಕ. 11:2 ಸಭೆ ಪರಲೋಕಕ್ಕೆ ಒಯ್ಯಲ್ಪಟ್ಟ ತಕ್ಷಣವೇ ಲೋಕ ರಾಷ್ಟ್ರಗಳ ಸಹಾಯದಿಂದ ಕ್ರಿಸ್ತ ವಿರೋಧಿಯು ಲೋಕ ಮುಖಂಡನಾಗಿ ಪ್ರವೇಶಿಸಿ ಇಸ್ರಾಯೇಲಿನೊಂದಿಗೆ ಸಮಾಧಾನದ ಒಡಂಬಡಿಕೆಯನ್ನು ಮಾಡುವನು. ಪ್ರಾರಂಭದ ಮೂರುವರೆ ವರ್ಷಗಳು ತನ್ನ ಒಡಂಬಡಿಕೆಯನ್ನು ಪಾಲಿಸುವನಾದರೂ ನಂತರ ಅದನ್ನು ಪಾಲಿಸದೇ ಸ್ವಯಂ ದೇವರಾಗಿ ಮೆರೆಯುವನು. ಈ ಸಮಯದಲ್ಲಿ ಇಸ್ರಾಯೇಲ್ ಜನಾಂಗವನ್ನು ಕ್ರಿಸ್ತ ವಿರೋಧಿಯ ಕೈಯಿಂದ ಬಿಡಿಸುವುದಕ್ಕೂ ಸೈತಾನನ್ನು ಎದುರಿಸುವುದಕ್ಕೂ ಈ ಇಬ್ಬರು ಸಾಕ್ಷಿಗಳು ಪ್ರತ್ಯಕ್ಷರಾಗುವರು. ಈ ಇಬ್ಬರು ಸಾಕ್ಷಿಗಳು ಯಾರೆಂದು ಅನೇಕರಲ್ಲಿ ಭಿನ್ನಾಭಿಪ್ರಾಯಗಳಿವೆ. ಕೆಲವರು ಮೋಶೆ ಎಲೀಯರೆಂದೂ ಇನ್ನು ಕೆಲವರು ಹನೋಕ ಎಲೀಯರೆಂದು ಹೇಳುತ್ತಾರೆ ಇವರಿಗೆ ಇಬ್ಬರು ಸಾಕ್ಷಿಗಳೆಂದೇ ಹೊರತು ಬೇರೆ ಹೆಸರುಗಳನ್ನು ಕೊಡಲಿಲ್ಲ.

**ಮೋಶೆ ಎಲೀಯರೆಂಬ ವಾದ**

1) ಹನೋಕ ಎಲೀಯರು ಪ್ರವಾದಿಗಳಾಗಿದ್ದಂತೆ ಈ ಇಬ್ಬರು ಸಾಕ್ಷಿಗಳು ಸೇವೆಯಲ್ಲಿ ಪ್ರವಾದಿಗಳು (ಪ್ರಕ. 11:3–10).

2) ಈ ಇಬ್ಬರು ಸಾಕ್ಷಿಗಳು ಭೂಲೋಕದ ಒಡೆಯನ ಮುಂದೆ ನಿಂತಿರುವ ಎರಡು ಎಣ್ಣೆ ಮರಗಳು ಎರಡು ದೀಪಸ್ತಂಭಗಳು (ಪ್ರಕ. 11:4, ಜೆಕ. 4:11–14).

3) ಇಬ್ರಿ. 9:27 ರಲ್ಲಿ ಒಂದೇ ಸಲ ಸಾಯುವುದು ಅನಂತರ ನ್ಯಾಯತೀರ್ಪು ಎಂಬ ವಾಕ್ಯ ನೆರವೇರಬೇಕಾದರೆ ಹನೋಕ ಎಲೀಯ ಮರಣವಿಲ್ಲದೆ ಎತ್ತಲ್ಪಟ್ಟಿರುವುದರಿಂದ ಮಹಾಸಂಕಟಕಾಲದಲ್ಲಿ ಈ ವಾಕ್ಯದ ನೆರವೇರಿಕೆಯಾಗಿ ಸಾಯುತ್ತಾರೆ.

4) ಮಲಾಕಿಯ ಪ್ರವಾದನೆಯಲ್ಲಿ ಎಲೀಯನು ಬರುವನೆಂದು ಹೇಳಿರುವುದು ಸ್ನಾನಿಕ ಯೋಹಾನನ ಕುರಿತಲ್ಲ ಮಲಾ. 4:5 ಕಾರಣ ಯೋಹಾನನೇ ಇದರ ಕುರಿತು ನಾನು ಎಲೀಯನಲ್ಲವೆಂದು ಹೇಳಿದ್ದಾನೆ. ಯೋಹಾ. 1:21 ಯೋಹಾನನು ಎಲೀಯನ ಅದೇ ಶಕ್ತಿ ಮತ್ತು ಆತ್ಮನಿಂದ ಕ್ರಿಸ್ತನ ಮೊದಲನೇ ಬರೋಣಕ್ಕೆ ದಾರಿಯನ್ನು ಸಿದ್ಧಪಡಿಸಿದ್ದು ನಿಜ ಆದರೆ ನಿಜವಾದ ಎಲೀಯನು ಕ್ರಿಸ್ತನ ದ್ವಿತೀಯಾಗಮನಕ್ಕೆ ಸ್ನಾನಿಕ ಯೋಹಾನನೋಪಾದಿಯಲ್ಲಿ ದಾರಿಯನ್ನು ಸಿದ್ಧ ಮಾಡಲು ಬರುವನು.

5) ಮರಣ ಹೊಂದದೆ ಒಯ್ಯಲ್ಪಟ್ಟ ಈ ಇಬ್ಬರು ಪ್ರವಾದಿಗಳ ಒಂದು ವಿಶೇಷತೆ ಏನೆಂದರೆ ಇವರಿಬ್ಬರೂ ನ್ಯಾಯತೀರ್ಪಿನ ಪ್ರವಾದಿಗಳಾಗಿದ್ದಾರೆ (ಯೂದ. 1:14:15, 1 ಅರಸು. 17:1–3).

6) ಒಂದು ವೇಳೆ ಹನೋಕ ಎಲೀಯರು ಮಹಿಮೆಯ ಶರೀರಗಳೊಡನೆ ರೂಪಾಂತರ ಹೊಂದಿರುವುದಾದರೆ ಕ್ರಿಸ್ತನಿಗೆ ಬದಲಾಗಿ ಇವರೇ ಸತ್ತವರೊಳಗಿಂದ ರೂಪಾಂತರ ಹೊಂದಿದ ಪ್ರಥಮ ಫಲದಂತಾಗುವರು. ಆದ್ದರಿಂದ ಈ ಇಬ್ಬರು ಈಗಲೂ ಪರದೈಸದಲ್ಲಿ ತಮ್ಮ ಸಾಧಾರಣ ಶರೀರದೊಂದಿಗೆ ಇದ್ದಾರೆ. ಪ್ರಕಟಣೆ 11ರ ಘಟನೆಯ ನಂತರ ಇವರು ರೂಪಾಂತರ ಹೊಂದಿ ಮಹಿಮೆಯ ಶರೀರವನ್ನು ಹೊಂದುತ್ತಾರೆ. ನಾನು ಇದಕ್ಕೆ ಹೇಳುವುದನೇಂದರೆ ಸಭೆಯ ಎತ್ತಲ್ಪಡುವಿಕೆ ಸಮಯದಲ್ಲಿ ಈ ನಿಯಮವು ಏನಾಗುತ್ತದೆ **"ಒಂದೇ ಸಾರಿ ಸಾಯುವದೂ ಆ ಮೇಲೆ ನ್ಯಾಯತೀರ್ಪು"** (ಇಬ್ರಿ. 9:27).

ಮುಂದುವರಿಯುವದು.....

**ಪಾಸ್ಟರ್ ಸುನಿಲ್ ಜಾನ್ ಡಿ'ಸೋಜಾ**
ಹಿರಿಯ ಸಭಾಪಾಲಕರು, ಬೇತೇಲ್ ಚರ್ಚ್.

ನೀತಿವಂತನ ವಂಶವು ಶುಭ ಹೊಂದುವುದು ಅವನ ಮನೆಯಲ್ಲಿ ಧನೈಶ್ವರ್ಯಗಳಿರುವವು (ಕೀರ್ತ.112:2).

# ಬಲ ಹೊಂದಿಕೊ

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

**"ಯೆಹೋವನು ತನ್ನ ಜನರಿಗೆ ಬಲವನ್ನು ಅನುಗ್ರಹಿಸುವನು; ಆತನು ತನ್ನ ಪ್ರಜೆಗೆ ಸುಕ್ಷೇಮವನ್ನು ದಯಪಾಲಿಸುವನು"** (ಕೀರ್ತ. 29:11).

ದೇವ ಮಕ್ಕಳಾದ ನಾವು ಲೋಕದಲ್ಲಿ ಜೀವಿಸುತ್ತಿರುವ ಈ ಕಠಿನ ಕಾಲದಲ್ಲಿ ಶೋಧನೆ, ವೇದನೆಗಳಿಂದ ಸೋತು ಬಲಹೀನರಾಗುವ ಸಂಭವಗಳು ಅನೇಕವಿರುವುದು. ಆದರೆ ಸೋತು ಬಲಹೀನರಾಗಿ, ಕುಗ್ಗಿ ಹಿಂಜರಿದು ಹೋಗುವ ಮೊದಲು ನಮ್ಮನ್ನು ನಾವು ಕ್ರಿಸ್ತನಲ್ಲಿ ಬಲಪಡಿಸಬೇಕಾಗಿದೆ. ಪೌಲನು ಹೇಳುತ್ತಾನೆ, **"ನನ್ನನ್ನು ಬಲಪಡಿಸುವಾತನಲ್ಲಿ ದ್ದುಕೊಂಡು ಎಲ್ಲಕ್ಕೂ ಶಕ್ತನಾಗಿದ್ದೇನೆ"** (ಫಿಲಿ. 4:13).

**ವಯುಸ್ಕರ ಸ್ವರ**

**"ಯೆಹೋವನು ಸೋತವನಿಗೆ ತ್ರಾಣವನ್ನು ಅನುಗ್ರಹಿಸಿ ನಿರ್ಬಲನಿಗೆ ಬಹುಬಲವನ್ನು ದಯಪಾಲಿಸುತ್ತಾನೆ"** (ಯೆಶಾ. 40:29).

ದೇವ ಮಗುವೆ ವೇದನೆ ಶೋಧನೆ, ಕಷ್ಟ ಸಂಕಟಗಳಲ್ಲಿ ಹಾದು ಹೋಗುತ್ತಿರುವ ನೀನು ಸಂಗತಿಯನ್ನು ಅರಿತವನಾಗು. ವೇದನೆ ಕಷ್ಟಗಳು ನಮ್ಮ ಮೇಲೆರಗಿ ನಾವು ಬಲಹೀನರಾಗಬಹುದು ಆದರೆ ನಮ್ಮೊಳಗೆ ವಾಸಿಸುವ ಕರ್ತನು ಎಂದಿಗೂ ಬಲಹೀನನಲ್ಲ ಆತನು ಎಲ್ಲವನ್ನು ಮಾಡಲು, ನಡೆಸಲು ಶಕ್ತನು. ಹಬಕ್ಕೂಕನು ಬರೆಯುತ್ತಾನೆ, **"ಕರ್ತನಾದ ಯೆಹೋವನೇ ನನ್ನ ಬಲ; ಆತನು ನನ್ನ ಕಾಲನ್ನು ಜಿಂಕೆಯ ಕಾಲಿನಂತ ಚುರುಕುಮಾಡಿ ನನ್ನ ಉನ್ನತಪ್ರದೇಶಗಳಲ್ಲಿ ನನ್ನನ್ನು ನಡಿಸುತ್ತಾನೆ"**. (ಹಬ. 3:19). ನಿಜವಾಗಿ ಕರ್ತನ ಬಲವನ್ನು ಆ ವೇಳೆಯಲ್ಲಿ ಹೊಂದುವಾಗಲೇ ನಾವು ಬಲಹೀನರಾಗದೆ ಬಲಗೊಳ್ಳುತ್ತೇವೆ. ದೇವ ಮಗುವೇ ನೀನು ತಿಳಿದುಕೊಳ್ಳು ಆತನು ಸರ್ವಶಕ್ತನು (ಆದಿ. 17:1). ಮಾರ್ಪಡದವನು ಆಗಿದ್ದಾನೆ (ಮಲಾ. 3:6, ಇಬ್ರಿ. 13:8). ಎಲ್ಲವನ್ನೂ ಒದಗಿಸುವನು (ಆದಿ. 22:14). ಸಕಲಕಾರ್ಯಗಳನ್ನು ನಡಿಸುವನು (ಯೋಬ. 42:2). ನಮ್ಮೊಡನೆ ಇರುವವನೂ ಆಗಿದ್ದಾನೆ (ರೋಮ. 8:31). **"ನಿನ್ನ ಬಲದಿಂದ ದಂಡಿನ ಮೇಲೆ ಬೀಳುವೆನು"** (ಕೀರ್ತ. 18:29).

ನಾವು ಕರ್ತನಲ್ಲಿ ಹೇಗೆ ಬಲ ಹೊಂದಿಕೊಳ್ಳುವುದು ಎಂಬುವುದನ್ನು ಧ್ಯಾನಿಸೋಣವೆ?

**1) ಕೃಪೆಯಿಂದ ಬಲ ಹೊಂದುವುದು :** (2 ತಿಮೊ. 2:1) ಕೃಪೆಯಿಂದ ನಾವು ಬಲ ಹೊಂದಿದವರಾಗಿರಬೇಕು. ದೇವರ ಕೃಪೆ ನಮ್ಮನ್ನು ಶೋಧನೆಗಳಲ್ಲಿ ಬಲಪಡಿಸುತ್ತದೆ. ನಿಜವಾಗಿಯೂ ದೇವರು ಮೆಚ್ಚುವಕಾರ್ಯ ಯಾವುದೆಂದರೆ **"ಆತನ ಕೃಪೆಯನ್ನು ನಿರೀಕ್ಷಿಸುವ ಭಕ್ತರಲ್ಲೇ ದೇವರು ಆನಂದಿಸುತ್ತಾನೆ"** (ಕೀರ್ತ. 147:11) ನಮ್ಮ ಜೀವಿತ ಕಾಲವೆಲ್ಲಾ ದೇವರ ಕೃಪೆಯನ್ನು ನಿರೀಕ್ಷಿಸುತ್ತಾ, ಕೃಪೆಯನ್ನು ಹೊಂದಿಕೊಳ್ಳುತ್ತಾ ಬಲಗೊಳ್ಳಬೇಕು. ನಿಜವಾದ ದೇವರ ಕೃಪೆಯಲ್ಲಿ ನಿಲ್ಲಬೇಕು (1 ಪೇತ್ರ. 5:12). ಮಾತ್ರವಲ್ಲದೆ ದೇವರ ಕೃಪೆಯಲ್ಲಿ ಅಭಿವೃದ್ಧಿಯಾಗುತ್ತಾ ಇರಬೇಕು. ನಮಗೆ ಸಿಕ್ಕಿದ ದೇವರ ಕೃಪೆಯನ್ನು ವ್ಯರ್ಥಮಾಡದೆ (2 ಕೊರಿ. 6:1) ಅದನ್ನು ನಿರರ್ಥಕಮಾಡದೆ (ಇಬ್ರಿ. 12:19, ಗಲಾ. 2:21). ಹಾಗೂ ಕೃಪೆಗೆ ತಪ್ಪಿ ಹಿಂಜರಿದು ಹೋಗದೆ ದೀನರಾಗಿ ಆತನ ಕೃಪೆಗೆ ಪಾತ್ರರಾಗಿರಬೇಕು (ಯಾಕೋ. 4:6).

ದೇವ ಮಗುವೆ ಯೆಹೋವನಲ್ಲಿ ಭರವಸವಿಟ್ಟವರ ಮೇಲೆ ತನ್ನ ಕೃಪೆಯನ್ನು ಸುರಿಸುತ್ತಾನೆ (ಕೀರ್ತ. 32:10). ಮಾತ್ರವಲ್ಲದೆ ಮುಂಜಾನೆ ವೇಳೆ ಆತನ ಸನ್ನಿಧಿಯಲ್ಲಿ ಕಾದುಕೊಂಡಿರುವವರಿಗೆ ಆತನ ಕೃಪೆಯು ಸಂತೋಷಪಡಿಸುತ್ತದೆ (ಕೀರ್ತ. 90:14). ಕೃಪೆಯು ಯಾವ ಯೋಗ್ಯತೆ ಇಲ್ಲದ ನಮಗೆ ಆತನು ತೋರಿಸುವ ದಯೆಯೇ ಆಗಿದೆ. ನನ್ನ ಸೇವೆಯ ಜೀವಿತದಲ್ಲಿ ಸಂಭವಿಸಿದ ಅನೇಕ ಹೋರಾಟ, ಇಕ್ಕಟ್ಟು ಸಂಕಟಗಳಲ್ಲಿ ದೇವರು ನನ್ನ ಮೇಲೆ ತನ್ನ ಅತಿಶಯವಾದ ಕೃಪೆಯನ್ನು ಸುರಿಸಿ ನನ್ನನ್ನು ಬಲಪಡಿಸಿದ ಸಂದರ್ಭಗಳು ಹೇರಳವಾಗಿದೆ ಎಂದು ಖಂಡಿತವಾಗಿಯೂ ನಾನು ಹೇಳಬಲ್ಲೆ. ಆತನ ನಾಮಕ್ಕೆ ಸ್ತೋತ್ರವಾಗಲಿ ಹಲ್ಲೆಲೂಯ.

ಮುಂದುವರಿಯುವದು.....

**ಪಾ॥ ರೊನಾಲ್ಡ್ ಮಚಾದೋ**

*ಬೇತೇಲ್ ಚರ್ಚ್ ಕಾಮಗೆರೆ.*

ನೀನು ನನಗೆ ಆಧಾರವಾಗಿರು ಆಗ ನಾನು ಸುರಕ್ಷಿತನಾಗಿ ಸದಾ ನಿನ್ನ ನಿಬಂಧನೆಗಳನ್ನು ಲಕ್ಷಿಸುವೆನು (ಕೀರ್ತ.119:117).

# ಪ್ರಶ್ನೋತ್ತರಗಳ ಸ್ವರ

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

ದೇವರ ತ್ರೈಯೇಕತ್ವಕ್ಕೆ ಉದಾಹರಣೆಯಾಗಿ ನಾವು ಅನೇಕ ಸಂಗತಿಗಳನ್ನು ಹೊಸ ಒಡಂಬಡಿಕೆಯಲ್ಲಿ ಕಾಣಬಹುದು. **"ಜನರೆಲ್ಲಾ ದೀಕ್ಷಾಸ್ನಾನ ಮಾಡಿಸಿಕೊಂಡಾಗ ಯೇಸು ಸಹ ಸ್ನಾನ ಮಾಡಿಸಿಕೊಂಡು ಪ್ರಾರ್ಥನೆ ಮಾಡುತ್ತಿರುವಲ್ಲಿ ಆಕಾಶವು ತೆರೆಯಿತು; ಮತ್ತು ಪವಿತ್ರಾತ್ಮನು ದೇಹಾಕಾರವಾಗಿ ಪಾರಿವಾಳದ ಹಾಗೆ ಆತನ ಮೇಲೆ ಇಳಿದನು. ಆಗ ನೀನು ಪ್ರಿಯನಾಗಿರುವ ನನ್ನ ಮಗನು, ನಿನ್ನನ್ನು ನಾನು ಮೆಚ್ಚಿದ್ದೇನೆ ಎಂದು ಆಕಾಶವಾಣಿ ಆಯಿತು"** (ಲೂಕ. 3:21–22).

ದೇವರು ತ್ರೇಯಕತ್ವದ ದ್ವಿತಿಯ ವ್ಯಕ್ತಿ ಮಾನವನಾಗಿ ಈ ಲೋಕಕ್ಕೆ ಬಂದು ನೀರಿನಲ್ಲಿ ಮುಳುಗಿ ದೀಕ್ಷಾಸ್ನಾನ ತೆಗೆದುಕೊಂಡನು. ಆಗ ತ್ರಯೇಕತ್ವದ 3ನೆಯ ವ್ಯಕ್ತಿ ಪರಿಶುದ್ಧಾತ್ಮನು ಕರ್ತನಾದ ಯೇಸುವಿನ ಮೇಲೆ ಇಳಿದನು. ಪರಲೋಕದಿಂದ ತ್ರಯೇಕತ್ವದ ಮೊದಲನೆಯ ವ್ಯಕ್ತಿ ತಂದೆಯಾದ ದೇವರು ಮಾತನಾಡಿದನು.

1) **"ಆದರೆ ಅವನು ಪವಿತ್ರಾತ್ಮಭರಿತನಾಗಿ ಆಕಾಶದ ಕಡೆಗೆ ದೃಷ್ಟಿಸಿ ನೋಡಿ ದೇವರ ಪ್ರಭಾವವನ್ನೂ, ದೇವರ ಬಲಗಡೆಯಲ್ಲಿ ನಿಂತಿದ್ದ ಯೇಸುವನ್ನೂ ಕಂಡೆನು"** (ಅ.ಕೃ. 7:55).

1. ಸ್ತೇಫನ ತ್ರಯೇಕತ್ವದ 3ನೇ ವ್ಯಕ್ತಿಯಾದ ಪವಿತ್ರಾತ್ಮನಿಂದ ತುಂಬಿದನು.
2. ಸ್ತೇಫನ ತ್ರಯೇಕತ್ವದ ಮೊದಲ ವ್ಯಕ್ತಿಯಾಗಿರುವ ತಂದೆಯಾದ ದೇವರನ್ನು ಕಂಡನು.
3. ಸ್ತೇಫನ ತ್ರಯೇಕತ್ವದ 2 ವ್ಯಕ್ತಿಯಾಗಿರುವ ಕರ್ತನಾದ ಯೇಸುಕ್ರಿಸ್ತನನ್ನು ತಂದೆಯಾದ ದೇವರ ಬಲಗಡೆಯಲ್ಲಿ ನಿಂತಿರುವುದನ್ನು ಕಂಡನು.

**2) ಪರಿಶುದ್ಧಾತ್ಮನು ದೇವರಾಗಿದ್ದಾನೆ :–** ಲೋಕದಲ್ಲಿ ಮನುಷ್ಯರಿಂದ ದೇವರೆನಿಸಿಕೊಳ್ಳುವಂಥವು ಅನೇಕವಿವೆ ಆದರೆ ಅವು ದೇವರಲ್ಲಾ ಎಂದು ಸತ್ಯವೇದ ತಿಳಿಸುತ್ತದೆ. **"ಅನೇಕರನ್ನು ದೇವರುಗಳೆಂದೂ ಕರ್ತರೆಂದೂ ಪೂಜಿಸುವದುಂಟು ನಿಜವೇ; ಆಕಾಶದಲ್ಲಿಯಾಗಲಿ ಭೂಮಿಯ ಮೇಲೆಯಾಗಲಿ ದೇವರುಗಳೆನಿಸಿಕೊಳ್ಳುವವರಿದ್ದಾರೆ, ನಮಗಾದರೋ ಒಬ್ಬನೇ ದೇವರಿದ್ದಾನೆ; ಆತನು ತಂದೆಯೆಂಬಾತನೇ; ಆತನು ಸಮಸ್ತಕ್ಕೂ ಮೂಲ ಕಾರಣನು; ನಾವು ಆತನಿಗಾಗಿ ಉಂಟಾದೇವು. ಮತ್ತು ನಮಗೆ ಒಬ್ಬನೇ ಕರ್ತ; ಆತನು ಯೇಸುಕ್ರಿಸ್ತನೇ; ಆತನ ಮುಖಾಂತರ ಸಮಸ್ತವೂ ಉಂಟಾಯಿತು, ನಾವೂ ಆತನ ಮುಖಾಂತರ ಉಂಟಾದೆವು"** (1 ಕೊರಿ. 8:5–6).

ದೇವರನ್ನು ದೇವರು ಎಂದು ಕರೆಯಬೇಕಾದರೆ ಆತನಿಗೆ ದೈವಿಕವಾದ ಕೆಲವು ಗುಣಲಕ್ಷಣಗಳು ಇರುವುದು ಪ್ರಾಮುಖ್ಯವಾಗಿದೆ.

ಉದಾಹರಣೆಗೆ :

ಎ) ದೇವರು ಸರ್ವಶಕ್ತನಾಗಿರಬೇಕು

ಬಿ) ದೇವರು ಸರ್ವವ್ಯಾಪಿಯಾಗಿರಬೇಕು

ಸಿ) ದೇವರು ಸರ್ವಜ್ಞಾನಿಯಾಗಿರಬೇಕು

ಡಿ) ದೇವರು ಸರ್ವವನ್ನು ನೋಡುವವನಾಗಿರಬೇಕು

ಇ) ದೇವರು ಸರ್ವವನ್ನು ಕೇಳುವವನಾಗಿರಬೇಕು

ಎಫ್) ದೇವರು ನಿತ್ಯಕ್ಕೂ ಇರುವವನಾಗಿರಬೇಕು

ಜಿ) ದೇವರು ಆತ್ಮಸ್ವರೂಪನಾಗಿರಬೇಕು

ಎಚ್) ದೇವರು ಪರಿಶುದ್ಧನಾಗಿರಬೇಕು

ಐ) ದೇವರು ಸೃಷ್ಟಿಕರ್ತನಾಗಿರಬೇಕು

ಜೆ) ದೇವರು ಸರ್ವವನ್ನು ಆಳುವವನಾಗಿರಬೇಕು.

ಹೀಗೆ ದೇವರ ದೈವಿಕವಾದ ಅನೇಕ ಗುಣಲಕ್ಷಣಗಳನ್ನು ತ್ರಯೇಕ ದೇವರಾದ ತಂದೆ ದೇವರು ಮಗನಾದ ದೇವರಾದ ಯೇಸುಕ್ರಿಸ್ತನು ಪರಿಶುದ್ಧಾತ್ಮ ದೇವರಾದ ಪವಿತ್ರಾತ್ಮನಲ್ಲಿ ನಾವು ಕಾಣಲು ಸಾಧ್ಯ.

**ಪರಿಶುದ್ಧಾತ್ಮನ ದೈವಿಕ ಗುಣಲಕ್ಷಣಗಳು :**

1) ಪರಿಶುದ್ಧಾತ್ಮನು ನಿರ್ಮಿಸುವ ಆತ್ಮನಾಗಿದ್ದಾನೆ (ಯೋಬ. 33:4).

2) ಪರಿಶುದ್ಧಾತ್ಮನು ಕರ್ತನಾಗಿದ್ದಾನೆ (2 ಕೊರಿ. 3:17).

3) ಪರಿಶುದ್ಧಾತ್ಮನು ದೇವರ ಆತ್ಮನಾಗಿದ್ದಾನೆ ( 2 ಕೊರಿ. 3:3).

4) ಪರಿಶುದ್ಧಾತ್ಮನು ನಿತ್ಯಕ್ಕೂ ಜೀವಿಸುವವನಾಗಿದ್ದಾನೆ (ಇಬ್ರಿ. 9:14).

5) ಪರಿಶುದ್ಧಾತ್ಮನು ಕ್ರಿಸ್ತನ ಆತ್ಮನಾಗಿದ್ದಾನೆ (1 ಪೇತ್ರ. 1:11).

6) ಪರಿಶುದ್ಧಾತ್ಮನು ಸರ್ವಶಕ್ತನಾಗಿದ್ದಾನೆ (ಲೂಕ. 1:35).

ಯೆಹೋವನು ತಾನೇ ನಿನ್ನ ಮುಂದುಗಡೆ ಹೋಗುವನು ಆತನೇ ನಿನ್ನ ಸಂಗಡ ಇರುವನು (ಧರ್ಮೋ. 3:18).

7) ಪರಿಶುದ್ಧಾತ್ಮನು ಸರ್ವವ್ಯಾಪಿಯಾಗಿದ್ದಾನೆ (ಕೀರ್ತ. 139:1–12).

8) ಪರಿಶುದ್ಧಾತ್ಮನು ಸರ್ವವನ್ನು ತಿಳಿದವನಾಗಿದ್ದಾನೆ (1 ಕೊರಿ. 2:10–14).

9) ಪರಿಶುದ್ಧಾತ್ಮನು ಆತ್ಮಸ್ವರೂಪನಾಗಿದ್ದಾನೆ (ಎಫೆ. 4:30).

10) ಪರಿಶುದ್ಧಾತ್ಮನು ಸಕಲವನ್ನು ಆಳುತ್ತಾನೆ (ಜೆಕ.4:6–7).

**3) ಪರಿಶುದ್ಧಾತ್ಮನು ನಮ್ಮ ಹಾಗೆ ವ್ಯಕ್ತಿತ್ವವುಳ್ಳವನು :** ಸತ್ಯವೇದದಲ್ಲಿ ಪರಿಶುದ್ಧಾತ್ಮನ ವ್ಯಕ್ತಿತ್ವವನ್ನು ನಾವು ಕಾಣಬಹುದು. ಅನೇಕರು ಪವಿತ್ರಾತ್ಮನ ಬಗ್ಗೆ ತಪ್ಪಾಗಿ ತಿಳಿದಿರುತ್ತಾರೆ. ಪವಿತ್ರಾತ್ಮನು ಗಾಳಿ, ಪಾರಿವಾಳ, ಮಂಜುಗಡ್ಡೆ, ಬೆಂಕಿ ಎಂಬುದಾಗಿ ಅನೇಕರು ಯೋಚಿಸುತ್ತಾರೆ. ಮೇಲಿನ ಸಂಗತಿಗಳಿಗೆ ಗುರುತಾಗಿ ಆತನ ಕಾರ್ಯಗಳಿಗೆ ಹೋಲಿಸಬಹುದೇ ವಿನಹ ಸತ್ಯವೇದ ನಮಗೆ ತಿಳಿಸುವಂತೆ ಹಾಗೂ ವಾಸ್ತವವಾಗಿ ಪರಿಶುದ್ಧಾತ್ಮನು ನಮ್ಮ ಹಾಗೆ ವ್ಯಕ್ತಿತ್ವವುಳ್ಳವನು.

1. ಪರಿಶುದ್ಧಾತ್ಮನಿಗೆ ದು:ಖವಾಗುತ್ತದೆ (ಎಫೆ. 4:30).
2. ಪರಿಶುದ್ಧಾತ್ಮ ತಡೆಯುತ್ತಾನೆ (ಅ.ಕೃ. 16:7).
3. ಪರಿಶುದ್ಧಾತ್ಮನು ಮಾತನಾಡುತ್ತಾನೆ (ಅ.ಕೃ. 13:1–3).
4. ಪರಿಶುದ್ಧಾತ್ಮನು ಪ್ರಾರ್ಥಿಸುತ್ತಾನೆ (ರೋಮ. 8:26).
5. ಪರಿಶುದ್ಧಾತ್ಮನು ಉಪದೇಶಿಸುತ್ತಾನೆ (ನೆಹೆ. 9:20).
6. ಪರಿಶುದ್ಧಾತ್ಮನು ಪ್ರೋತ್ಸಾಹಿಸುತ್ತಾನೆ (ಅ.ಕೃ. 9:31).
7. ಪರಿಶುದ್ಧಾತ್ಮನು ಧೈರ್ಯಕೊಡುತ್ತಾನೆ (2 ತಿಮೊ. 1:7).

ಯೋಹಾ. 16:7–15ರಲ್ಲಿ ಪರಿಶುದ್ಧಾತ್ಮನ ಕುರಿತು 14 ಬಾರಿ ಪುರುಷಾರ್ಥಕ ಸರ್ವನಾಮವು ಉಪಯೋಗಿಸಲ್ಪಟ್ಟಿದೆ.

ಮುಂದುವರೆಯುವದು.......

**ಪಾ॥ ಸುನಿಲ್ ಜಾನ್ ಡಿ'ಸೋಜಾ.**

ಆರೋಗ್ಯ ಸ್ವರ

# ಚಳಿಗಾಲದಲ್ಲಿ ಚರ್ಮದ ರಕ್ಷಣೆ

ಚಳಿಗಾಲದಲ್ಲಿ ತಂಗಾಳಿಯಿಂದಾಗಿ ಚರ್ಮವು ಒಣಗುತ್ತದೆ, ಒರಟಾಗುತ್ತದೆ, ಒಡೆಯುತ್ತದೆ. ಆದ್ದರಿಂದ ಚಳಿಗಾಲದಲ್ಲಿ ಚರ್ಮದ ಬಗ್ಗೆ ಹೆಚ್ಚಿನ ಕಾಳಜಿ ಅಗತ್ಯ. ದುಬಾರಿ ಬೆಲೆಯ ಕ್ರೀಮ್, ತೈಲಗಳನ್ನು ಬಳಸದೆ ಮನೆಯಲ್ಲೇ ಮಾಡುವ ಕೆಲವು ಚಿಕಿತ್ಸೆಗಳಿಂದ ಚಳಿಗಾಲದಲ್ಲಿ ಚರ್ಮವು ಸುಲಭವಾಗಿ ರಕ್ಷಿಸಲ್ಪಡುತ್ತದೆ. ಸೋಪುಗಳು ಚರ್ಮವನ್ನು ಬಿರುಸಾಗಿರಿಸಬಹುದು. ಸಾಮಾನ್ಯವಾಗಿ ಗಂಡಸರು ತಮ್ಮ ಚರ್ಮದ ಸೌಂದರ್ಯದ ಬಗ್ಗೆ ನಿರ್ಲಕ್ಷ್ಯ ವಹಿಸುತ್ತಾರೆ. ಆದರೆ, ಇಂದಿನ ಕಾಲದಲ್ಲಿ ಚರ್ಮದ ಆರೋಗ್ಯವೂ ಅಷ್ಟೇ ಮುಖ್ಯವಾದುದು. ಪುರುಷರಾಗಲಿ, ಸ್ತ್ರೀಯರಾಗಲಿ ಸ್ನಿಗ್ಧವಾದ ಸೌಂದರ್ಯ ಇಂದಿನ ಜೀವನ ವಿಧಾನಕ್ಕೆ ಅಗತ್ಯವಾಗಿದೆ. ಇಲ್ಲಿರುವ ವಿಧಾನಗಳನ್ನು ಪುರುಷರೂ ಅನುಸರಿಸಬಹುದಾಗಿದೆ.

* 100 ಗ್ರಾಂ ಹೆಸರು ಕಾಳನ್ನು ಹುರಿದು ಪುಡಿ ಮಾಡಿ, ಅದಕ್ಕೆ ಅರ್ಧ ಚಮಚ ಅರಸಿನ ಪುಡಿ ಬೆರೆಸಿ. ಇದನ್ನು ಹಾಲಲ್ಲಿ ಅಥವಾ ನೀರು ಹಾಕಿ ತೆಳ್ಳಗೆ ಮಾಡಿ ಮೈಗೆ ಲೇಪಿಸಿ ಸ್ನಾನ ಮಾಡಿದರೆ ಚರ್ಮ ಮೃದುವಾಗಿ ಕಾಂತಿಯುತವಾಗುತ್ತದೆ.

* 100 ಗ್ರಾಂ ಕಡಲೆ ಹಿಟ್ಟಿಗೆ 1 ಚಮಚ ಮೆಂತೆ ಪುಡಿ ಬೆರೆಸಿ ಹಾಲು ಅಥವಾ ನೀರಲ್ಲಿ ಹಾಕಿ ತೆಳು ಮಾಡಿ ಮೈಗೆ ಲೇಪಿಸಿ ಸ್ನಾನ ಮಾಡಿದರೆ ಚರ್ಮ ಕಾಂತಿಯುತವಾಗುತ್ತದೆ. ಅಂಗೈ–ಅಂಗಾಲು ಮತ್ತು ಮೈ ಒಡೆದರೆ ಆ ಭಾಗಗಳಿಗೆ ಲಿಂಬೇರಸ ಹಚ್ಚಿ ತಿಕ್ಕಿ ಅರ್ಧ ಗಂಟೆಯ ನಂತರ ಬೆಣ್ಣೆ ಅಥವಾ ಹಾಲಿನ ಕೆನೆಯನ್ನು ಲೇಪಿಸಿ ಮಾಲೀಶು ಮಾಡಿ. ಜಜ್ಜಿದ ಈರುಳ್ಳಿಯಿಂದ ತಿಕ್ಕಿದರೂ ಬಿರುಕುಗಳು ಗುಣವಾಗುತ್ತವೆ. ಸುಂದರ ಚರ್ಮ ನಿಮ್ಮದಾಗಲು ದಿನಾ ಎರಡು ಲೀಟರ್ ನೀರು ಕುಡಿಯಬೇಕು. ತುಟಿಗಳು ಒಡೆದರೆ ಶ್ರೀಗಂಧ ಮತ್ತು ಬೆಣ್ಣೆಯನ್ನು ಕಲಸಿ ಈ ಮಿಶ್ರಣವನ್ನು ತುಟಿಗಳಿಗೆ ದಿನಾ ಎರಡು ಬಾರಿ ಲೇಪಿಸಿ. ಬಿಸಿಲಿಗೆ ಹೊರ ಹೋಗುವಾಗ ತುಟಿಗಳಿಗೆ ಎಣ್ಣೆ ಅಥವಾ ವ್ಯಾಸಲೀನ್ ಹಚ್ಚಿರಿ. ಅಭ್ಯಂಗ ಚಳಿಗಾಲದಲ್ಲಿ ಹಿತಕರ. ಎಳ್ಳೆಣ್ಣೆ ಮತ್ತು ಇದರಿಂದ ರಕ್ತ ಸಂಚಾರ ವೃದ್ಧಿಯಾಗುತ್ತದೆ. ಚರ್ಮ ಕೋಮಲವಾಗುತ್ತದೆ. ಅರ್ಧ ಗಂಟೆಯ ಅನಂತರ ಉಗುರು ಬೆಚ್ಚಗಿನ ನೀರು

ಸೇನಾಧೀಶ್ವರನಾದ ಯೆಹೋವನು ನಮ್ಮ ಸಂಗಡ ಇದ್ದಾನೆ; ಯಾಕೋಬವಂಶದವರ ದೇವರು ನಮಗೆ ಆಶ್ರಯದುರ್ಗವಾಗಿದ್ದಾನೆ (ಕೀರ್ತ. 46:11).

ಸ್ನಾನ ಮಾಡಿ. ತೆಂಗಿನೆಣ್ಣೆಗೆ ಚಿಟಿಕೆ ಅರಸಿನಪುಡಿ ಬೆರೆಸಿ ಅದನ್ನು ಮೈಗೆ ಲೇಪಿಸಿ ಮಾಲೀಶು ಮಾಡಿ. ಇದರಿಂದ ರಕ್ತ ಸಂಚಾರ ವೃದ್ಧಿಯಾಗುತ್ತದೆ. ಚರ್ಮ ಕೋಮಲವಾಗುತ್ತದೆ. ಅರ್ಧ ಗಂಟೆಯ ಆನಂತರ ಉಗುರು ಬೆಚ್ಚಗಿನ ನೀರು ಸ್ನಾನ ಮಾಡಿ. ತೆಂಗಿನೆಣ್ಣೆಗೆ ಚಿಟಿಕೆ ಅರಸಿನಪುಡಿ ಬೆರಸಿಯೂ ಮೈಗೆ ಲೇಪಿಸಬಹುದು. ನಸು ಬೆಚ್ಚಗಿನ ನೀರಿನಿಂದ ಮುಖ ತೊಳೆದರೆ ಚರ್ಮ ಕಾಂತಿಯುತವಾಗುತ್ತದೆ. ಅರಸಿನ ಮತ್ತು ಗಂಧವನ್ನು ತೇದು ಮುಖಕ್ಕೆ ಲೇಪಿಸಿದರೂ ಮುಖದ ಕಾಂತಿ ಹೆಚ್ಚುತ್ತದೆ. ಕೈ ಕಾಲುಗಳಲ್ಲಿ ಬಿರುಕಿನಿಂದ ತುರಿಕೆ, ನೋವು ಉಂಟಾದರೆ ಅಗಲವಾದ ಪಾತ್ರೆಯಲ್ಲಿ ಪಾದ ಮುಳುಗುವಷ್ಟು ಬಿಸಿನೀರಿನಲ್ಲಿ ಒಂದು ಚಮಚ ಅಡುಗೆ ಸೋಡಾ ಮತ್ತು ಮೂರು ಚಿಟಿಕೆ ಅರಸಿನ ಪುಡಿ ಬೆರೆಸಿ 15 ನಿಮಿಷ ಪಾದಗಳನ್ನು ಮುಳುಗಿಸಿ ಇಡಿ. ಆಗಾಗ ಹೀಗೆ ಮಾಡುವುದರಿಂದ ತುರಿಕೆ, ಬಿರುಕು ಗುಣವಾಗುತ್ತದೆ. ರಾತ್ರಿ ಮಲಗುವಾಗ ಪಾದಗಳಿಗೆ ಉಗುರು ಬೆಚ್ಚಗೆ ಮಾಡಿದ ಎಳ್ಳೆಣ್ಣೆ ಲೇಪಿಸಿ ಹಳೆ ಕಾಲು ಚೀಲ ಧರಿಸಿ. ಇದರಿಂದ ಪಾದಗಳು ಮೃದುವಾಗಿ ಸುಂದರವಾಗುತ್ತದೆ.

ಚಳಿಗಾಲದಲ್ಲಿ ಕೆಲವರಿಗೆ ಮೈಯ ಚರ್ಮ ಒಣಗಿ ತುರಿಕೆ, ಕಜ್ಜಿ ಉಂಟಾಗುತ್ತದೆ. ಆಗ ಹುಣಸೇ ಎಲೆಗಳನ್ನು ಅರೆದು ತುರಿಕೆ ಇರುವಲ್ಲಿ ಹಚ್ಚಿ ಓಮ ಮತ್ತು ಅರಸಿನವನ್ನು ಸಮಪ್ರಮಾಣದಲ್ಲಿ ಅರೆದು ಲೇಪಿಸಿ. ಸೀಬೆ ಎಲೆಗಳನ್ನು ಅರಸಿನದೊಂದಿಗೆ ನಯವಾಗಿ ಅರೆದು ಲೇಪಿಸಿ. ಚಳಿಗಾಲದಲ್ಲಿ ಕೂದಲು ಉದುರುವುದು ಹೆಚ್ಚು. ಆದ್ದರಿಂದ ಕೊಬ್ಬರಿ ಎಣ್ಣೆ ಅಥವಾ ಎಳ್ಳೆಣ್ಣೆಯನ್ನು ಉಗುರು ಬೆಚ್ಚಗೆ ಮಾಡಿ ನಿತ್ಯವೂ ಕೂದಲಿನ ಬುಡಕ್ಕೆ ಹಚ್ಚಿ ಮಾಲೀಶು ಮಾಡಬೇಕು. ತಲೆಸ್ನಾನಕ್ಕೆ ಉಗುರು ಬೆಚ್ಚಗಿನ ನೀರು ಉಪಯೋಗಿಸಬೇಕು.

ಚರ್ಮದ ಆರೈಕೆಗೆ ಬಾಹ್ಯ ಲೇಪನದ ಜೊತೆಗೆ ಆಹಾರದಲ್ಲಿ ಗೋಧಿ, ರಾಗಿ, ಬಾದಾಮಿ, ಗೋಡಂಬಿ, ಬೆಣ್ಣೆ, ತುಪ್ಪ, ಕ್ಯಾರೆಟ್, ಟೊಮೆಟೊ, ಪಾಲಕ್ ಬಸಳೆ.

## ಅಂಗಿಯಲ್ಲಿ ಕಲೆಯೇ?

ಬಟ್ಟೆಗಳಿಗೆ ಕಲೆಗಳಾಗುವುದು ಸಾಮಾನ್ಯ. ಅದೂ ಮಕ್ಕಳ ಬಟ್ಟೆಗಳೆಂದರೆ ದಿನಕ್ಕೊಂದು ಕಲೆಯಿಂದ ಶೋಭಿಸದಿದ್ದರೆ, ಅವುಗಳನ್ನು ತುಂಟ ಮಕ್ಕಳ, ಚತುರ ಪೋರರ ಬಟ್ಟೆಬರೆ ಎನ್ನಲಾದೀತೆ?!

ವಿವಿಧ ಬಟ್ಟೆಗಳಿಗೆ ಬಗೆಬಗೆಯ ವಸ್ತು, ಎಣ್ಣೆ, ತೈಲ ಇತ್ಯಾದಿಗಳಿಂದ ಕಲೆಗಳಾಗುವುದು ಸಹಜ. ಬಗೆಬಗೆಯ ವಸ್ತುಗಳ ಕಲೆಗಳಿಗೆ ವಿವಿಧ ರೀತಿಯ ಕಲೆನಿವಾರಕಗಳಿವೆ. ಇವುಗಳ ಕುರಿತಾದ ಅರಿವು ಗೃಹಿಣಿಯರಿಗಿದ್ದರೆ ಚಕಾಚಕ್ ಕಲೆಗಳನ್ನು ನಿವಾರಿಸಿ, ಚಮಕ್ ಚಮಕ್ ಎಂದು ಬಟ್ಟೆಬರೆಗಳ ಹೊಳಪು ಮತ್ತು ಶುಭ್ರತೆಯನ್ನು ಹೆಚ್ಚಿಸಬಹುದು!

ಚಹಾ ಕಲೆಗಳ ನಿವಾರಣೆಗೆ ಮಕ್ಕಳಿಂದ ಹಿಡಿದು ದೊಡ್ಡರವರೆಗೆ ಬಟ್ಟೆಯ ಮೇಲೆ ಚಹಾ ಕಲೆ ಉಂಟಾಗುವುದು ಸಾಮಾನ್ಯ. ಚಹಾ ಬಿದ್ದ ತಕ್ಷಣ ಟಾಲ್ಕಂ ಪೌಡರ್ ಹಾಕಿ ಒರೆಸಿ, ಬಳಿಕ ಬಿಸಿ ನೀರಿನಲ್ಲಿ ಸೋಪ್ ಹುಡಿ ಹಾಕಿ ಕರಗಿಸಿ ಅದರಲ್ಲಿ ಅದ್ದಿ ಇಡಬೇಕು. ಬಳಿಕ ಸೋಪಿನಿಂದ ತಿಕ್ಕಿ ತೊಳೆದರೆ ಚಹಾ ಕಲೆ ಮಾಯ!

ಗ್ಲಿಸರಿನ್ ಹಚ್ಚಿ 1 ಗಂಟೆ ಹಾಗೇ ಇಟ್ಟು ಬಳಿಕೆ ಸೋಪಿನಿಂದ ತಿಕ್ಕಿದರೂ ಚಹಾ ಕಲೆಯ ಬಟ್ಟೆಶುಭ್ರವಾಗುತ್ತದೆ.

ಕಾಫಿ ಕಲೆಗಳ ನಿವಾರಣೆಗೆ ನಿಂಬೆಹಣ್ಣಿನ ಸಿಪ್ಪೆಯಿಂದ ತಿಕ್ಕಿ ಬಳಿಕ, ಉಪ್ಪಿನ ಹುಡಿಯಿಂದ ಉಜ್ಜಬೇಕು. ಬಳಿಕ ತೊಳೆದು ಬಿಸಿನೀರಿನಲ್ಲಿ ಸೋಪಿನ ಹುಡಿ ಹಾಕಿ ಕರಗಿಸಿ ಅದರಲ್ಲಿ ನೆನೆಸಿಟ್ಟು ತಿಕ್ಕಿ ತೊಳೆದರೆ ಕಾಫಿ ಕಲೆಗಳು ಮಾಯವಾಗುತ್ತವೆ.

ಮಸಿ ಕಲೆಗಳ ನಿವಾರಣೆಗೆ ಮಸಿ ತಾಗಿ ಬಟ್ಟೆಗಳಿಗೆ ಕಲೆಯಗಿದ್ದರೆ ಎರಡು ಹನಿ ಸೀಮೆಎಣ್ಣೆಯನ್ನು ಆ ಭಾಗದಲ್ಲಿ ಹಾಕಿ ಚೆನ್ನಾಗಿ ತಿಕ್ಕಬೇಕು. ಬಳಿಕ ಸೋಪಿನಿಂದ ಉಜ್ಜಿತೊಳೆದರೆ ಮಸಿಯ ಕಲೆ ನಿವಾರಣೆಯಾಗುತ್ತದೆ.

ನಿಂಬೆಹಣ್ಣನ್ನು ಅರ್ಧ ಕತ್ತರಿಸಿ ಅದರ ಮೇಲೆ ಉಪ್ಪಿನ ಹುಡಿ ಹರಡಿ ಅದರಿಂದ ಮಸಿಯಾದ ಬಟ್ಟೆಯನ್ನು ತಿಕ್ಕಿದರೂ ಕಲೆ ನಿವಾರಣೆಯಾಗುತ್ತದೆ.

– ಸಂಗ್ರಹ.

ಯೆಹೋವನೇ, ನಿನ್ನ ಜನರನ್ನು ರಕ್ಷಿಸು; ನಿನ್ನ ಸ್ವಕೀಯ ಪ್ರಜೆಯನ್ನು ಆಶೀರ್ವದಿಸು.
(ಕೀರ್ತ. 28:9).

# ಬೈಬಲ್ ಕ್ವಿಜ್

1. ಕನಿಷ್ಠ ಎಷ್ಟು ಮಂದಿ ಇರುವುದಾದರೆ ದೇವರು ತಾನು ಸೊದೋಮ್‌ಗೊಮೋರ ಪಟ್ಟಣಗಳನ್ನು ನಾಶಮಾಡುವುದಿಲ್ಲ ಎಂದನು?
2. "ಲೋರು ಹಾಮಾ" ಎಂಬ ಪದದ ಅರ್ಥವೇನು?
3. "ಲೋ ಅಮ್ಮಿ" ಎಂಬ ಪದದ ಅರ್ಥವೇನು/
4. ಚೆಫನ್ಯನು ಯಾರ ಮಗನು?
5. ಸೊಲೊಮೋನನ ಮಗಳಾದ ಟಾಪಾತಳು ಯಾರ ಮಗನನ್ನು ಮದುವೆಯಾದಳು?
6. ಹಳೇ ಒಡಂಬಡಿಕೆಯಲ್ಲಿ ಸೆರೆಮನೆಗೆ ಹಾಕಲ್ಪಟ್ಟ ಮೊದಲನೇ ವ್ಯಕ್ತಿ ಯಾರು?
7. ಹೊಸ ಒಡಂಬಡಿಕೆಯಲ್ಲಿ ಸೆರೆಮನೆಗೆ ಹಾಕಲ್ಪಟ್ಟ ಮೊದಲನೇ ವ್ಯಕ್ತಿ ಯಾರು?
8. ಏಸಾವನ ಹೆಂಡತಿಯರ ಹೆಸರೇನು?
9. ಸೊಲೊಮೋನನಿಗೆ ರಾಜ ವಂಶದವರೇ ಆದಂಥ ಎಷ್ಟು ಮಂದಿ ಪತ್ನಿಯರು ಇದ್ದರು?
10. ಸೊಲೊಮೋನನು ರಚಿಸಿದ ಜ್ಞಾನೋಕ್ತಿಗಳು ಹಾಗೂ ಗೀತಗಳು ಎಷ್ಟು?
11. "ಇಸ್ರಾಯೇಲ್" ಎಂಬ ಪದದ ಅರ್ಥವೇನು?
12. ಹೋಶೇಯನು (ಪ್ರವಾದಿ) ಮದುವೆಯಾದ ವ್ಯಭಿಚಾರಿಣಿ ಯಾರು?
13. ಇಡೀ ಸತ್ಯವೇದದಲ್ಲಿಯೇ ಬಹಳ ವರ್ಷಗಳು ಬದುಕಿದ ವ್ಯಕ್ತಿ ಯಾರು?
14. ರೆಹಬ್ಬಾಮನು ಯಾರ ಮಗನು?
15. ದಾವೀದನು ದಿನ ತುಂಬಿದ ಮುದುಕನಾದಾಗ ಅವನನ್ನು ಪರಾಂಬರಿಸಿದ ಸೇವಕಿ ಯಾರು?

---

**ಜೂನ್ ತಿಂಗಳ ಮಕ್ಕಳ ಸ್ವರ ಸಂಚಿಕೆಯ ಸರಿ ಉತ್ತರಗಳು :**

1. 66 ಪುಸ್ತಕಗಳನ್ನೊಳಗೊಂಡ ಪರಿಶುದ್ಧ ಗ್ರಂಥವೇ ಸತ್ಯವೇದ
2. 66
3. ದೇವರು ಲೋಕದ
4. "ರೊಟ್ಟಿಯ ಮನೆ"
5. ಬೇತ್ಲೆಹೇಮ್
6. ಹಸುಗಳಿಗೆ ಮೇವನ್ನಿಡುವ ಕೊಟ್ಟಿಗೆ
7. ಕರ್ತನ ಮಹಿಮೆಯ ಬೆಳಕು
8. ಹೆದರಬೇಡಿರಿ, ಕೇಳಿರಿ; ಜನರಿಗೆಲ್ಲಾ ಮಹಾ ಸಂತೋಷವನ್ನುಂಟುಮಾಡುವ ಶುಭಸಮಾಚಾರವನ್ನು ನಿಮಗೆ ತಿಳಿಸುತ್ತೇನೆ. ಅದೇನಂದರೆ, ಈ ಹೊತ್ತು ನಿಮಗೋಸ್ಕರ ದಾವೀದನೂರಲ್ಲಿ ಒಬ್ಬ ರಕ್ಷಕನು ಹುಟ್ಟಿದ್ದಾನೆ.

ಅದ್ಭುತಗಳನ್ನು ನಡಿಸುವ ದೇವರು ನೀನೇ; ಜನಾಂಗಗಳಲ್ಲಿ ಪರಾಕ್ರಮವನ್ನು ತೋರ್ಪಡಿಸಿದಿ (ಕೀರ್ತ. 77:14).

# ಮರುಭುಂಯ್ತ್ ಇಶ್ಮಾಯೇಲ್

**ಕಳೆದ ಸಂಚಿಕೆಯಿಂದ ಮುಂದುವರಿದಿದೆ.**

ಫಾಂತ್ಯಾಫರಾರ್ ಆಬ್ರಾಹಾಮಾನ್ ಹಾಗರಾಕ್ ಆನಿಂ ತಾಚ್ಯಾ ಪುತಾಕ್ ಭಾಯ್ರ್ ಧಾಡ್ಚಿ ವಿಲೆವಾಗಿ ಕೆಲಿ. ಪಯ್ಣಾಕ್ ಭುತಿ ಆನಿಂ ಉದಾಕ್ ದೀವ್ನ್ ಧಾಡ್ಲೆಂ. ಪುಣ್ ಪಯ್ಣಾವೆಳಿಂ ತಾನಿಕೆನ್ ಹಾಡಲ್ಲೆಂ ಉದಾಕ್ ಸಂಪ್ಲೆಂ, ಭುರ್ಗ್ಯೊ ತಾನಿಕೇನ್ ಉದ್ಕಾಕ್ ಹಾಕ್‌ಬೊಬ್ ಮಾರ್‍ತಾಲೊ. ಹಾಗರ್ "ಮ್ಹಜ್ಯಾ ಪೂತಾನ್ ಮ್ಹಜ್ಯಾ ಮುಕಾರ್ ಮರ್ಚೆಂ ಹಾಂವ್ ಕಶೆಂ ಪಳೆಂವ್" ಮ್ಹಣೊನ್ ಭುರ್ಗ್ಯಾ ಥಾವ್ನ್ ಇಲ್ಲೆಂ ಪಯ್ಸ್ ಸರೊನ್ ಕಸ್ಕಸೊನ್ ರಡ್ಲಿ. ತಿಚೆಂ ರಡ್ಣೆಂ ಸರ್ವೆಸ್ಪರ್ ದೇವಾನ್ ಆಯ್ಕಾಲೆಂ ತೆದ್ನಾ ಸರ್ಗಿಂಚ್ಯಾ ದೂತಾನ್ "ತುಜ್ಯಾ ಚೆರ್ಕ್ಯಾಕ್ ಉಟಯ್ ತಾಚೊ ಹಾತ್ ಧರ್‍ನ್ ಸಾಂಭಾಳ್ ತಾಕಾ ಎಕ್ ವರ್‍ತೊ ಲೋಕ್ ಜಾವ್ನ್ ಹಾಂವ್ ನಿರ್ಮಾಣ್ ಕರ್‍ತಲೊಂ. ಮ್ಹಣ್ ಹಾಕ್ ಮಾರ್ಲಿ. ಉಪ್ರಾಂತ್ ಸರ್ವೆಸ್ಪರ್ ದೇವಾನ್ ತಾಂಕಾಂ ಉದ್ಕಾ ಝುರ್ ದಾಕಯ್ಲಿ ಆನಿಂ ಹಾಗರಾನ್ ತಾಂತ್ಲೆಂ ಉದಾಕ್ ಆಪ್ಲ್ಯಾ ಪೂತಾಕ್ ಪಿಯೆಂವ್ಕ್ ದಿಲೆಂ.

ಭುರ್ಗ್ಯೊ ಮರುಭುಂಯ್ತ್ ವಾಡೊನ್ ವ್ಹಡ್ ಜಾವ್ನ್ ಎಕ್ ಬಳಾದೀಕ್ ಶಿಕಾರಿ ಜಾಲೊ. ಹಾಗರಾನ್ ಎಜಿಪ್ತಾಚೆಂ ಚೆಡುಂ ವಿಂಚುನ್ ಇಶ್ಮಾಯೇಲಾಚೆಂ ಕಾಜಾರ್ ಕರಯ್ಲೆಂ. ಸರ್ವೆಸ್ಪರ್ ದೇವ್ ತಾಂಚೆ ಬರಾಬರ್ ಆಸಲ್ಲೊ.

**ಆಬ್ರಾಹಾಮಾಚೆಂ ಯಜ್ನದಾನ್** :– ಥೊಡ್ಯಾ ಕಾಳಾ ನಂತರ್ ಸರ್ವೆಸ್ಪರ್ ದೇವಾನ್ ಆಬ್ರಾಹಾಮಾಚಿ ಪರೀಕ್ಷಾ ಕೆಲಿ. ಸರ್ವೆಸ್ಪರ್ ದೇವಾನ್ ಆಬ್ರಾಹಾಮಾಕ್ ಮ್ಹಳೆಂ "ತುಜ್ಯಾ ಪೂತಾಕ್ ಇಜಾಕಾಕ್ ಘೆ ಆನಿಂ ಮೋರಿಯಾ ಗಾಂವಾಕ್ ವಚ್ ಥಂಯ್ ಹಾಂವೆ ಫರ್ಮಾಯಿಲ್ಲ್ಯಾ ದೊಂಗಾರ್ ಮ್ಹಾಕಾ ತಾಚಿ ಯಜ್ನಬಲಿ ಜಾವ್ನ್ ಭೆಟಯ್" ಆಬ್ರಾಹಾಮಾನ್ ಸರ್ವೆಸ್ಪರ್ ದೇವಾಚ್ಯಾ ಉತ್ರಾಂಕ್ ಖಾಲ್ತಿಮಾನ್ ಘಾಲೊ.

ದುಸ್ರ್ಯಾ ದಿಸಾ ಆಬ್ರಾಹಾಮಾನ್ ಆಪ್ಲೊ ಪೂತ್ ಇಜಾಕ್ ತಸೆಂ ದೋಗ್ ಚಾಕ್ರಾಂ ಬರಾಬರ್ ಸರ್ವೆಸ್ಪರ್ ದೇವಾನ್ ಸಾಂಗಲ್ಲ್ಯಾ ಸುವಾತೆಚೆಂ ಪಯ್ಣ್ ಧರ್ಲೆಂ. ತ್ಯಾ ಸುವಾತೆಕ್ ಪಾವ್ತಚ್ ಆಪ್ಲ್ಯಾ ಚಾಕ್ರಾಂಕ್ ಥಂಯ್ಚ್ ರಾವವ್ನ್ ಜಳವ್, ಉಚೊ, ದೊರಿ, ಸುರಿ ಆನಿಂ ಆಪ್ಲ್ಯಾ ಪೂತಾಕ್ ಕಾಣ್ಘೆವ್ನ್ ಘುಡೆಂ ದೊಂಗ್ರಾ ಥಳಾಕ್ ಚಮ್ಕಾಲೊ. ಅಶಿಂ ಪಾವ್ಲಾಂ ಕಾಡ್ತಾನಾ, ಭುರ್ಗ್ಯಾ ಇಜಾಕಾನ್ ಆಪ್ಲ್ಯಾ ಬಾಪಯ್ ಕಡೆಂ ವಿಚಾರ್ಲೆಂ "ಪಪ್ಪಾ.!. ಉಚೊ ಆಸಾ,... ಲಾಂಕುಡ್ ಆಸಾ... ಆಮ್ಕಾಂ ತಲಾಸ್ ಸಮರ್ಪುಂಚಿ ಶೆಳಿ ಖಂಯ್ ಆಸಾ?" "ಶೆಳಿ ಸರ್ವೆಸ್ಪರ್ ದೇವಚ್ ಆಮ್ಕಾಂ ತಲಾಸ್ ಕರುನ್ ದಿತಾಲೊ ಪುತಾ" ಮ್ಹಣ್ ಆಬ್ರಾಹಾಮ್ ಬಾಪಾನ್ ಚೆರ್ಕ್ಯಾಕ್ ಸಮಧಾನ್ ಕೆಲೆಂ.

ಉಪ್ರಾಂತ್ ಸರ್ವೆಸ್ಪರ್ ದೇವಾನ್ ಫರ್ಮಾಯಿಲ್ಲ್ಯಾ ಸುವಾತೆಕ್ ಪಾವ್ತಚ್ ದಾಳ್ಕ್ ದವರ್‍ಲ್ಯಾ ಲಾಂಕ್ಡಾಂ ವಯ್ರ್ ಇಜಾಕಾಚೆ ಹಾತ್ ಪಾಂಯ್ ಬಾಂದುನ್ ನಿದಾಯ್ಲೊ. ಉಪ್ರಾಂತ್ ಪುತಾಕ್ ಕಾತ್ರುನ್ ಬಲಿ ಭೆಟಂವ್ಕ್ ತಾಣೆಂ ಸುರಿ ಉಬಾರ್ತಾನಾ ಆಕಾಸಾ ಥಾವ್ನ್ ಎಕ್ ಉಲೊ ಆಯ್ಕಾಲೊ "ಆಬ್ರಾಹಾಮ್!! ಚೆರ್ಕ್ಯಾ ಚೇರ್ ಸುರಿ ಉಬಾರ್‍ನಾಕಾ ತುಂ ಮ್ಹಾಕಾ ಭಿಂಯೆವ್ನ್ ಚಲ್ತಾಯ್ ಮ್ಹಣ್ ಸಮ್ಜೊನ್ ಆಯ್ಲೆಂ ಕಿತ್ಯಾಕ್ ತುಜ್ಯಾ ಎಕ್ಲ್ಯಾಚ್ಚ್ ಪುತಾಕ್ ಸರ್ವೆಸ್ಪರ್ ದೇವಾಕ್ ಭೆಟಂವ್ಕ್ ತುಂ ಪಾಟಿಂ ಸರೊಂಕ್ ನಾಂಯ್."

ಥಂಯ್‌ಸರ್ ಎಕಾ ಝುಡಾ ಬಲ್ಲ್ಯಾಂತ್ ಎಕ್ ಬಕ್ರೊ ಶಿರ್ಕಾಲ್ಲೊ ಆಬ್ರಾಹಾಮಾನ್ ಪಳಯ್ಲೊ. ತಾಕಾ ಧರುನ್ ಹಾಡುನ್ ಇಜಾಕಾಚ್ಯಾ ಜಾಗ್ಯಾರ್ ತ್ಯಾ ಬಕ್ರ್ಯಾಚಿ ಬಲಿ ಭೆಟಯ್ಲಿ. ಆಬ್ರಾಹಾಮಾಚ್ಯಾ ನಿತಿವಂತ್ಪಣಾ ಖಾತಿರ್ ಸರ್ವೆಸ್ಪರ್ ದೇವಾನ್ ತಾಚೆರ್ ಆಶಿರ್ವಾದಾಚೊ ಶಿಂವರ್ ಒತ್ಲೊ.

ಆಬ್ರಾಹಾಮಾಕ್ ಸರ್ವೆಸ್ಪರ್ ದೇವ್ ಮ್ಹಣಾಲೊ "ತುಜ್ಯಾ ಸಂತತೇಕ್ ಆಕಾಸಾ ವಯ್ಲ್ಯಾ ನೆಕೆತ್ರಾಂ ಬರಿಂ ಆನಿಂ ದರ್ಯಾವೆಳೆಚ್ಯಾ ರೆಂವೆಬರಿಂ ವಾಡಯ್ತಲೊಂ, ದುಸ್ಮಾನಾಚಿಂ ಶಹರಾಂ ತುಮಿಂ ಆಪ್ಲಾ ಸ್ವಾದಿನ್ ಕರುನ್ ಘೆತೆಲ್ಯಾತ್, ತುಜೆ ಪಿಳ್ಗೆ ಮಾರಿಫಾತ್ ಭುಂಯ್‌ವಯ್ಲ್ಯಾ ಲೊಕಾಕ್ ಹಾಂವ್ ಆಶಿರ್ವಾದಾನಿಂ ಭರ್‍ತಲೊಂ."

**ಸೈರಿಕ್** : ಇಜಾಕ್ ವಾಡೊನ್ ಪ್ರಾಯೆಕ್ ಭರ್ತಾನಾ ಆಬ್ರಾಹಾಮಾನ್ ತಾಕಾ ಕಾಜಾರ್ ಕರುಂಕ್ ಚಿಂತ್ಲೆಂ. ಆಪ್ಲ್ಯಾ ಮಾಲ್ಘಡೊ ಚಾಕೊರ್ ಎಲಿಯೆಜರಾಕ್ ಆಪವ್ನ್ ಆಪ್ಲ್ಯಾ ಮ್ಹಾಲ್ಘಡ್ಯಾಂಚ್ಯಾ ಗಾಂವಾಕ್ ವಚುನ್ ಕುಟ್ಮಾದಾರಾಂಮಧ್ಲಿ ಎಕ್ ಚಲಿ ಇಜಾಕಾ ಖಾತಿರ್ ವಿಂಚುನ್ ಹಾಡಿಜಯ್ ಮ್ಹಣ್ ಸಾಂಗಾಲಾಗೊ. ಆಶೆಂ ಎಲಿಯೆಜರ್ ಸೈರಿಕೆಚೊ ಮ್ಹಾಲೊ ಜಾವ್ನ್ ಸಪುತಾ ಆನಿಂ ಶರ್ತಾಂ ಬರಾಬರ್ ಆಬ್ರಾಹಾಮಾಚ್ಯಾ

ನಮ್ಮ ಕರ್ತನೂ ದೊಡ್ಡವನೂ ಪರಾಕ್ರಮಿಯೂ ಆಗಿದ್ದಾನೆ; ಆತನ ಜ್ಞಾನವು ಅಪರಿಮಿತವಾಗಿದೆ
(ಕೀರ್ತ. 147:5).

ಪುರ್ವಜಾಂಚೊ ಗಾಂವ್ ಕಾನಾನಾಂತ್ಲ್ಯಾ ನಾಹೊರಾಕ್ ಭಾಯ್ರ್ ಸರ್ನ್ ಗೆಲೊ. ಸಾಂಗಾತಾಚ್ಯ್ ಧನ್ಯಾಚ್ಯಾ ಧನ್ -ದಿರ್ವಾಂತ್ಲ್ಯೊ ಮೊಲಾದೀಕ್ ಭಾಂಗಾರ್, ವಸ್ತು ಇನಾಮಾಂ ಜಾವ್ನ್ ತಾಣೆಂ ಕಾಣ್ಘೆತ್ಲ್ಯೊ. ಉಪ್ರಾಂತ್ ಕರ್‍ಯಾಂ ಸಾಂಗಾತಾ ತಾಣೆಂ ನಾಹೊರ್ ಗಾಂವಾಂಚೆ ಪಯ್ಣ್ ಧರ್ಲೆಂ.

ನಾಹೊರ್ ಗಾಂವಾಲಾಗಿಂ ಪಾವ್ತಚ್ಚ್ ಉದ್ಕಾ ಸುವಾತೆಲಾಗಿಂ ಎಲಿಯೆಜರಾನ್ ಆಪ್ಲ್ಯಾ ಕರ್‍ಯಾಂಕ್ ವಿಶೆವ್ ಘೆಂವ್ಕ್ ಸೊಡ್ಲೆಂ. ಆನಿಂ ಆಪ್ಲ್ಯಾ ಧನ್ಯಾನ್ ಸಾಂಗಲ್ಲೆಂ ಕಾಂ ಪರಿಪೂರ್ಣ್ ಜಾಂವ್ಚೆ ಖಾತಿರ್ ಸರ್ವೆಸ್ಪರ್ ದೇವಾಕ್ ಮಾಗ್ಣೆಂ ಭೆಟಯ್ಲೆಂ. ಮಾಗ್ಣೆಂ ಜಾತಚ್ಚ್ ಕುಶಿನ್ ದೀಷ್ಟ್ ಭಂವ್ಡಯ್ತಾನಾ ಉದ್ಕಾ ಕೊಳ್ಸೊ ಘೇವ್ನ್ ಯೆಂವ್ಚ್ಯಾ ಏಕಾ ಚಲಿಯೆಕ್ ತಾಣೆಂ ಪಳೆಯ್ಲೆಂ. ರೂಪಾನ್ ಬೋವ್ ಸುಂದರ್ ದಿಸ್ತಾಲೆಂ ತೆಂ. ತಾಕಾ ಪಳೆವ್ನ್ ಎಲಿಯೆಜರ್ ಮುಕಾರ್ ಸರ್ಲೊ ಆನಿಂ ವಿಚಾರಿಲಾಗ್ಲೊ, "ಬಾಯ್.. ತುಜ್ಯಾ ಕರ್‍ಯಾಂಕ್‌ಯ್ ಉದಾಕ್ ಒಡುನ್ ಹಾಡ್ತಾಂ" ಮ್ಹಣೊನ್ ತ್ಯಾ ಚಲಿಯೆನ್ ಎಲಿಯೆಜರಾಕ್ ಆನಿಂ ತಾಚ್ಯಾ ಕರ್‍ಯಾಂಕ್ ಉದಾಕ್ ಪಿಯೆಂವ್ಕ್ ದಿಲೆಂ. ತಿಚೆಂ ಬರೆಂ ಮನ್ ಪಳೆವ್ನ್ ಎಲಿಯೆಜರ್ ಆಜಾಪ್ಲೊ ! ಹಿಚ್ಚ್ ಚಲಿಗಾಯ್ ಮ್ಹಜ್ಯಾ ಧನ್ಯಾಚ್ಯಾ ಪುತಾ ಇಜಾಕಾಕ್ ಸರ್ವೆಸ್ಪರ್ ದೇವಾನ್ ನಿರ್ಮಿಲ್ಲಿ? ತಾಣೆಂ ಮತಿಂತ್ ಚಿಂತ್ಲೆಂ.

ತಾಣೆಂ ಚಲಿಯೆಲಾಗಿಂ ಹಳು ವಿಚಾರ್ಲೆಂ "ತುಜೆಂ ನಾಂವ್ ಕಿತೆಂಗೊ ಬಾಯೆ?"

"ಮ್ಹಜೆಂ ನಾಂವ್ "ರೆಬೆಕಾ" ಹಾಂವ್ ಬೆತುಯೆಲಾಚಿ ಧುವ್" ಚಲಿಯೆನ್ ಜಾಪ್ ದಿಲಿ. ಬೆತುಯೆಲ್ ಜಾವ್ನಾಸಲ್ಲೊ ಆಬ್ರಾಹಾಮಾಚೊ ಭಾವ್. "ತುಮಿಂ ಸಗ್ಳಿಂ ಆಮ್ಚ್ಯಾ ಘರಾ ಯೆಯಾತ್ ಆಮ್ಗೆರ್ ತುಮ್ಕಾಂ ಆನಿಂ ತುಮ್ಚ್ಯಾ ಕರ್‍ಯಾಂಕ್ ಧಾರಾಳ್ ಖಾಣ್ ಆಸಾ ಆನಿಂ ವಿಶೆವ್ ಘೆಂವ್ಕ್ ಸುವಾತ್ ಆಸಾ" ಚಲಿಯೆನ್ ವಿನತಿ ಕೆಲಿ.

ಹೆಂ ಆಯ್ಕೊನ್ ಆಬ್ರಾಹಾಮಾಚ್ಯಾ ಚಾಕ್ರಾನ್ ಸರ್ವೆಸ್ಪರ್ ದೇವಾಕ್ ಅರ್ಗಾಂ ಪಾಠಯ್ಲಿಂ ಆನಿಂ ಧನ್ಯಾನ್ ಧಾಡುನ್ ದಿಲ್ಲಿಂ ಕಾಂಕ್ಣಾಂ, ಕಾನಾಚಿಂ ತಶೆಂ ನಾಕಾಚಿಂ ನೊತ್ಯಾಂ ಆನಿಂ ಇನಾಮಾಂ ತಿಕಾ ದಿಲಿಂ. ಉಪ್ರಾಂತ್ ತಿಚೆ ಬರಾಬರ್ ತಿಚ್ಯಾ ಆವಯ್-ಬಾಪಯ್ ಆನಿಂ ಕುಟ್ಮಾಕ್ ಮೆಳ್ಚೆ ಖಾತಿರ್ ತಾಂಚ್ಯಾ ಘರ್ಚಿ ವಾಟ್ ಧರ್ಲಿ.

ಮುಂದುವರಿಯುವದು.....

**ಬರಯ್ಣಾರ್: ಜೆಸುದಾಸ್**
(ಡೇವಿಡ್ ಲುವಿಸ್ ತಲ್ಲುರ್).

## ಶೀಘ್ರದಲ್ಲೇ ಆರಂಭಿಸುವ ನಮ್ಮ ಹೊಸ ಯೋಜನೆಗಳು:

1. 50 ಬೆಡ್‌ನ ಆಸ್ಪತ್ರೆ
2. ಮದ್ಯವ್ಯಸನಿ ಪುನರ್‌ವಸತಿ ಕೇಂದ್ರ

**ನಾವು ಮಾಡುವ ಆಸ್ಪತ್ರೆ ಬಗ್ಗೆ ವಿವರಣೆ: ಈ ಎಲ್ಲಾ ಸೇವೆಗಳು ಅನಾಥರಿಗೆ, ನಿರ್ಗತಿಕರಿಗೆ, ಬಡವರಿಗೆ ಮಾತ್ರ.**

**ಈ ಯೋಜನೆಗಳಿಗಾಗಿ ಪ್ರಾರ್ಥನಾ ಮನವಿಗಳು :**

1) ಕಾಮಗಾರಿ ಕೆಲಸಗಳು ಒಳ್ಳೆಯ ರೀತಿಯಲ್ಲಿ ನಡೆಯುವುದಕ್ಕಾಗಿ ಪ್ರಾರ್ಥಿಸಿರಿ.
2) ನಂಬಿಗಸ್ತರಾದ ಮೇಸ್ತ್ರಿ ಹಾಗೂ ಇತರ ಕೆಲಸಗಾರರು ಸಿಗುವುದಕ್ಕಾಗಿ ಪ್ರಾರ್ಥಿಸಿರಿ.
3) ಈ ಯೋಜನೆಗಳನ್ನು ಆಶೀರ್ವದಿಸಲು ಪ್ರಾರ್ಥಿಸಿರಿ.
4) ಆರ್ಥಿಕ ನೆರವು ಒದಗಿ ಬರುವಂತೆ ಪ್ರಾರ್ಥಿಸಿರಿ.
5) ಈ ಯೋಜನೆಗೆ ಸರಕಾರದಿಂದ ಏನೆಲ್ಲಾ ಸವಲತ್ತುಗಳು ಹಾಗೂ ಅನುಮತಿ ಪತ್ರಗಳು ಸಿಗಬೇಕೋ ಅದು ಸಿಗುವುದಕ್ಕಾಗಿ ಪ್ರಾರ್ಥಿಸಿರಿ.
6) ಈ ಯೋಜನೆಯ ಪ್ರತಿಯೊಂದು ಕೆಲಸ ಕಾರ್ಯಗಳು ಯಾವುದೇ ತಡೆಯಿಲ್ಲದೇ ನಡೆಯುವಂತೆ ಪ್ರಾರ್ಥಿಸಿರಿ.
7) ಈ ಯೋಜನೆಯ ಮೂಲಕ ದೇವರ ಪರಿಶುದ್ಧವಾದ ನಾಮ ಮಹಿಮೆ ಹೊಂದುವುದಕ್ಕಾಗಿ ಪ್ರಾರ್ಥಿಸಿರಿ.

ದೇವರು ನನಗೆ ಕೃಪೆಯನ್ನು ಮಾಡಿದ್ದರಿಂದ ನನಗೆ ಸಮೃದ್ಧಿಯುಂಟು
(ಆದಿ. ೩೩:11).

## ತಿಳುವಳಿಕೆಯ ಸ್ವರ

# ಹಳೆಯ ಒಡಂಬಡಿಕೆಯ ಪುಸ್ತಕಗಳ ಸಂಗ್ರಹ

***ಕಳೆದ ಸಂಚಿಕೆಯಿಂದ ಮುಂದುವರಿದಿದೆ.***

ಹಳೇ, ಹೊಸ ಒಡಂಬಡಿಕೆಗಳ ಕೆಲವು ಪುಸ್ತಕಗಳ ಸಂಗ್ರಹ ಹೇಗಾಯಿತು? ಯಾವಾಗ ಆಯಿತೆಂಬ ವಿಷಯಗಳ ಸಂಶೋಧನೆಯಿಂದ ಇನ್ನೂ ಸ್ಪಷ್ಟವಾದ ವಿವರಣೆಗಳು ದೊರೆತಿಲ್ಲ. ಆದರೆ ಅತಿ ಅಲ್ಪ ವಿಷಯಗಳು ಮಾತ್ರ ತಿಳಿದಿದೆ. ಈ ಎರಡೂ ಒಡಂಬಡಿಕೆಗಳ ಪುಸ್ತಕಗಳನ್ನು ಬರೆಯಲು ಅನೇಕ ಶತಮಾನಗಳು ಕಳೆದಿವೆ.

ಹಳೇ ಒಡಂಬಡಿಕೆಯ ಕೆಲವು ಪುಸ್ತಕಗಳು ಅವುಗಳೇ ಸಂಗ್ರಹಗಳು. ಅರಸನಾದ ದಾವೀದನು ಬರೆದ ಕೀರ್ತನೆಗಳು ಒಂದು ಭಾಗದ ಸಂಗ್ರಹವಾಗಿದೆ. ದೇವಾಲಯಗಳಲ್ಲಿ ದೇವರನ್ನು ಆರಾಧಿಸಲು ಉಪಯೋಗಿಸುತ್ತಿರುವ ಈ ಕೀರ್ತನೆಗಳು ಬಹುವಾಗಿ ಗೌರವಿಸಲ್ಪಟ್ಟಿರುತ್ತಿತ್ತು. ಜ್ಞಾನೋಕ್ತಿಗಳಲ್ಲಿ ಬರೆಯಲ್ಪಟ್ಟ ಅನೇಕ ವಿಶೇಷವಾದ ಹೇಳಿಕೆಗಳು ಅರಸನಾದ ದಾವೀದನ ಮಗನಾದ ಸೊಲೊಮೋನನು ಬರೆದದ್ದು.

ಬಾಬಿಲೋನಿನಲ್ಲಿ ಸೆರೆಯಾಳುಗಳಾಗಿದ್ದ ಯೆಹೂದ್ಯರು ಬಿಡುಗಡೆಯಾದ ನಂತರದ ಸಮಯದಲ್ಲಿ ಸತ್ಯವೇದದ ವಿವಿಧ ಪುಸ್ತಕಗಳನ್ನು ಕ್ರಮಪಡಿಸಿ ಒಂದು ರೂಪಕ್ಕೆ ತರಲಾಯಿತು. ಕ್ರಿ.ಪೂ. ನಾಲ್ಕನೇ ಶತಮಾನದಲ್ಲಿ ಧರ್ಮಶಾಸ್ತ್ರದ ಗ್ರಂಥಗಳು ದೃಢವಾಗಿ ಪ್ರಕಟಿಸಲ್ಪಟ್ಟಿತು. ಕ್ರಿ.ಪೂ. ಎರಡನೇ ಶತಮಾನದಲ್ಲಿ ಪ್ರವಾದನಾ ಪುಸ್ತಕಗಳು ಕ್ರಮಪಡಿಸಲ್ಪಟ್ಟವು. ಕ್ರಿ.ಶ. 100ರಲ್ಲಿ ಹಳೇ ಒಡಂಬಡಿಕೆಯ ಎಲ್ಲಾ ಪುಸ್ತಕಗಳು ಕ್ರಮಬದ್ಧವಾದದೆಂದು ಸ್ವೀಕರಿಸಲ್ಪಟ್ಟಿತು. ಹೊಸ ಒಡಂಬಡಿಕೆಯ ಗ್ರಂಥಕರ್ತರು ಹಳೇ ಒಡಂಬಡಿಕೆಯ 39 ಪುಸ್ತಕಗಳಲ್ಲಿನ ಎಂಟು ಪುಸ್ತಕಗಳ ಕೆಲವು ಭಾಗಗಳನ್ನು ಉಲ್ಲೇಖಿಸಿರುವರು.

ನಾವು ಉಪಯೋಗಿಸುವ ಹಳೇ ಒಡಂಬಡಿಕೆಗಳ ಪುಸ್ತಕಗಳ ಸರಣಿ ಯೆಹೂದ್ಯರು ಉಪಯೋಗಿಸುವ ಧರ್ಮಶಾಸ್ತ್ರಕ್ಕೆ ಸ್ವಲ್ಪ ವ್ಯತ್ಯಾಸವಿರುವುದು. ಅದರಲ್ಲಿ ಮೂರು ಭಾಗಗಳಿದೆ. 1)ಧರ್ಮಶಾಸ್ತ್ರ 2)ಪ್ರವಾದನೆಗಳು 3)ಇತರೆ ಬರಹಗಳು.

ಇಬ್ರಿಯ ಗ್ರಂಥ ಮಾಲೆಯಲ್ಲಿ ಅಪೊಕ್ರಿಫ ಎಂಬ ಪುಸ್ತಕಗಳ ಸಂಗ್ರಹವನ್ನು ಸೇರಿಸಲಿಲ್ಲ ಮತ್ತು ಹೊಸ ಒಡಂಬಡಿಕೆಯ ಗ್ರಂಥಕರ್ತರು ಅಪೊಕ್ರಿಫದ ಯಾವ ಭಾಗವನ್ನು ಉಲ್ಲೇಖಿಸಲಿಲ್ಲ. ಆದರೆ ಅಪೊಕ್ರಿಫ ಗ್ರಂಥಗಳನ್ನು ಹಳೇ ಒಡಂಬಡಿಕೆಯ ಗ್ರೀಕ್ ಭಾಷಾಂತರದಲ್ಲಿ ಸೇರಿಸಲಾಗಿದೆ. ಈ ಹಳೇ ಒಡಂಬಡಿಕೆಯ ಗ್ರೀಕ್ ಭಾಷಾಂತರದ ಪುಸ್ತಕವನ್ನು ಸೆಪ್ಟುಅಜೆಂಟ್ (Septuagint) ಎಂದು ಕರೆಯಲಾಗುತ್ತಿದೆ.

ಯೇಸು ಕ್ರಿಸ್ತನು ಮನುಷ್ಯನಾಗಿ ಜನಿಸುವದಕ್ಕಿಂತ ಮುನ್ನೂರು ವರ್ಷಗಳ ಮೊದಲು ಗ್ರೀಕ್ ಭಾಷೆಯು ಅನೇಕ ರಾಷ್ಟ್ರಗಳ ರಾಷ್ಟ್ರೀಯ ಭಾಷೆಯಾಗಿತ್ತು ಆದುದರಿಂದ ಹಳೇ ಒಡಂಬಡಿಕೆಯ ಪುಸ್ತಕಗಳನ್ನು ಗ್ರೀಕ್ ಭಾಷೆಗೆ ಭಾಷಾಂತರಿಸುವುದು ಅಗತ್ಯವಾಯಿತು. ಈ ಗ್ರೀಕ್ ಭಾಷಾಂತರದ ಹಳೇ ಒಡಂಬಡಿಕೆಯ ಭಾಗಕ್ಕೆ ಸೆಪ್ಟು ಅಜೆಂಟ್ ಎಂಬ ಹೆಸರು ಬಂತು. ಈ ಹೆಸರು ಕಾರಣವೇನೆಂದರೆ ಗ್ರೀಕ್ ಭಾಷೆಯಲ್ಲಿ ಎಪ್ಪತ್ತು ಸಂಖ್ಯೆಗೆ ಸಪ್ಟುಅಜೆಂಟ್ ಎಂದು ಹೇಳುವರು. ರೋಮನ್ ಅಂಕೆ. Lxx ಕ್ರಿ.ಪೂ. 285–246 ರಲ್ಲಿ ಪ್ಟೋಲ್‌ಮಿ ಎರಡನೇ ಫಿಲಿಡೆಲ್ಪಸ್ (Ptolemy II Philedelphus) ಎಂಬಾತನು ಐಗುಪ್ತದಿಂದ ಎಪ್ಪತ್ತು ಹಿರಿಯ ಯೆಹೂದ್ಯರನ್ನು ಹಳೇ ಒಡಂಬಡಿಕೆಯ ಮತ್ತಿತರ ಪುಸ್ತಕಗಳನ್ನು ಭಾಷಾಂತರಿಸಲು ಕರೆಯಿಸಿದನು. ಆ ಸಂಖ್ಯೆಯನ್ನು ಆಧರಿಸಿ ಸೆಪ್ಟುಅಜೆಂಟ್ (Greek old Testment) ಎಂದು ಕರೆಯಲಾಗಿದೆ.

**ಹೊಸ ಒಡಂಬಡಿಕೆ :** ಪ್ರಾರಂಭದ ಕ್ರೈಸ್ತ ಗುಂಪುಗಳು ದೇವಾರಾಧನೆಗಾಗಿ ಕೂಡಿ ಬರುತ್ತಿರುವಾಗ ಯೆಹೂದ್ಯರು ಉಪಯೋಗಿಸುತ್ತಿದ್ದ ಹಳೇ ಒಡಂಬಡಿಕೆಯನ್ನೇ ಪಠಿಸುತ್ತಿದ್ದರು. ನಂತರ ಯೇಸುಕ್ರಿಸ್ತನ ವಿಷಯಗೊತ್ತಿದ್ದವರು ಆತನ ಜೀವಿತ ಮತ್ತು ಬೋಧನೆಯ ವಿಷಯಗಳಲ್ಲಿ ಮಾತಾಡುತ್ತಿದ್ದರು. ಅಪೊಸ್ತಲರ ಮರಣಾ ನಂತರ ಅವರ ಬರವಣಿಗೆಗಳ ಪತ್ರಿಗಳ ಅಗತ್ಯ ಬಿತ್ತು. ಸುವಾರ್ತೆಗಳು, ಅಪೋಸ್ತಲರ ಕೃತ್ಯಗಳು ಮತ್ತು ಅಪೋಸ್ತಲರ ಪತ್ರಿಕೆಗಳು ಇವುಗಳನ್ನು ಜಾಗ್ರತೆಯಾಗಿ ಕಾಪಾಡಿದರು. ಹಳೇ ಒಡಂಬಡಿಕೆಯ ಪುಸ್ತಕಗಳಂತೆ ಇವುಗಳಿಗೂ ವಿಶೇಷ ಪ್ರಾಧಾನ್ಯತೆಯನ್ನು ಕೊಟ್ಟರು. ಎರಡನೇ ಶತಮಾನದ ಅಂತ್ಯದೊಳಗೆ ಹೊಸ ಒಡಂಬಡಿಕೆಯ ನಾಲ್ಕು ಸುವಾರ್ತೆಗಳು ಸತ್ಯವೇದದ ಒಂದು ಭಾಗವಾಗಿ ಮಾನ್ಯತೆ

ಯೆಹೋವನ ಆಲೋಚನೆಯೋ ಶಾಶ್ವತವಾಗಿಯೇ ನಿಲ್ಲುವದು

(ಕೀರ್ತ. 33:11).

ಪಡೆಯಿತು.

**ಅಪೊಸ್ತಲರ ಕೃತ್ಯಗಳು :** ಅಪೊಸ್ತಲನಾದ ಶ್ರೀಪೌಲನ ಹದಿಮೂರು ಪತ್ರಿಕೆಗಳು ದೇವಾಲಯಗಳಲ್ಲಿ ಉಪಯೋಗಿಸಲು ಅಧಿಕೃತವಾಗಿ ಸ್ವೀಕರಿಸಲ್ಪಟ್ಟವು. ಪ್ರಕಟಣೆ ಮತ್ತು ಇಬ್ರಿಯ ಪತ್ರಿಕೆ ತಿಳುವಳಿಕೆಗೆ ಬಂದು ಯಪಯೋಗಿಸಲ್ಪಟ್ಟವು. ಪೇತ್ರನ ಎರಡು ಪತ್ರಿಕೆಗಳು, ಯೋಹಾನನ ಮೂರು ಪತ್ರಿಕೆಗಳು, ಯಾಕೋಬ ಮತ್ತು ಯೂದನ ಪತ್ರಿಕೆ, ಇವುಗಳು ಬೇರೆ ಪತ್ರಿಕೆಗಳಂತೆ ಸಾರ್ವಜನಿಕವಾಗಿ ಉಪಯೋಗಿಸಲು ಅಷ್ಟು ಉಪಯುಕ್ತವಾಗಿಲ್ಲವೆಂದು ಪ್ರಾರಂಭದಲ್ಲಿ ತಿಳಿದು ಅನಂತರದಲ್ಲಿ ನಿಧಾನವಾಗಿ ಉಪಯೋಗಿಸಲ್ಪಟ್ಟಿತು. ನಾಲ್ಕನೆಯ ಶತಮಾನದಲ್ಲಿ ಸಭೆಯ ಮಹಾ ಅಧಿವೇಶನದಲ್ಲಿ ಈಗಿರುವ ಹಳೇ ಮತ್ತು ಹೊಸ ಒಡಂಬಡಿಕೆಗಳ ಪುಸ್ತಕಗಳನ್ನು ಒಟ್ಟು ಸೇರಿಸಿ ಸತ್ಯವೇದವಾಗಬಹುದೆಂದು ಒಪ್ಪಿಗೆ ಕೊಡಲಾಯಿತು.

**ಭಾಷಾಂತರಗಳು :** ಸೆಪ್ಟುಅಜೆಂಟ್ ಗ್ರೀಕ್ ಭಾಷೆಯ ಹಳೇ ಒಡಂಬಡಿಕೆ. ಸುರಿಯಾ, ಕೋಪ್‌ಟಿಕ್ ಮತ್ತು ಗೋಥಿಕ್ ಸಭೆಯು ಅಭಿವೃದ್ಧಿಹೊಂದುತ್ತಿದ್ದಂತೆ ಶಾಸ್ತ್ರಗಳ ಭಾಷಾಂತರವು ಅಗತ್ಯವೆಂದು ಕಂಡುಬಂತು. ಭೂಮಧ್ಯ ಸಮುದ್ರದ ಪೂರ್ವಭಾಗದಲ್ಲಿ ಹೆಚ್ಚಾಗಿ ಬಳಕೆಯಲ್ಲಿದ್ದ ಸಿರಿಯಾ ಭಾಷೆಗೆ ಎರಡನೇ ಶತವಮಾನದಲ್ಲಿ ಸತ್ಯವೇದವನ್ನು ಭಾಷಾಂತರಿಸಲಾಯಿತು. ಮೂರನೇ ಶತಮಾನದಲ್ಲಿ ಐಗುಪ್ತರ ಭಾಷೆಯಾದ ಕೋಪ್‌ಟಿಕ್ ಭಾಷೆಗೆ ಭಾಷಾಂತರಿಸಲಾಯಿತು. ನಾಲ್ಕನೇ ಶತಮಾನದಲ್ಲಿ ಡಾನ್ಯೂಬ್ ನದಿಯ ಭಾಗಗಳಲ್ಲಿದ್ದ ಗುಡ್ಡಗಾಡಿನ ಜನರ ಭಾಷೆಯಾಗಿದ್ದ ಗೋಥಿಕ್ ಭಾಷೆಗೆ ಸತ್ಯವೇದವನ್ನು ಭಾಷಾಂತರಿಸಲಾಯಿತು.

**ಲಾತೀನ್ ಭಾಷಾಂತರ :** ರೋಮನ್ ಸಾಮ್ರಾಜ್ಯದಲ್ಲಿ ಲಾತೀನ್ ಭಾಷೆಯು ರಾಷ್ಟ್ರೀಯ ಭಾಷೆಯಾಗಿತ್ತು. ಎರಡನೇ ಶತವಮಾನದಲ್ಲಿಯೇ ಲಾತೀನ್ ಭಾಷೆಗಳಲ್ಲಿ ಅನೇಕ ಸತ್ಯವೇದಗಳು ಇದ್ದವು. ರೋಮಿನ ಬಿಶಪರು, ಜೆರೋಂ ಎಂಬ ಕ್ರೈಸ್ತ ಭಾಷಾ ಪಂಡಿತವನ್ನು ಸುಲಭ ಶೈಲಿಯ ಲಾತೀನ್ ಭಾಷೆಯಲ್ಲಿ ಸತ್ಯವೇದವನ್ನು ತಯಾರಿಸಲು ನೇಮಕ ಮಾಡಿದರು. ಈತನು 25 ವರ್ಷಗಳಲ್ಲಿ ಅನೇಕ ಮೂಲ ಪ್ರತಿಗಳನ್ನು ಅಭ್ಯಾಸಿಸಿ ಕ್ರಿ.ಶ. 410ರಲ್ಲಿ ಭಾಷಾಂತರದ ಕೆಲಸವನ್ನು ಪೂರ್ಣಗೊಳಿಸಿದನು. ಇದು ಲಾತೀನ್ ಭಾಷಾಂತರದ ಸತ್ಯವೇದವೆಂದು ಪರಿಗಣಿಸಲಾಯಿತು. ಜನಸಾಮಾನ್ಯರು ಪ್ರತಿದಿನ ಉಪಯೋಗಿಸುತ್ತಿದ್ದ ಭಾಷೆಯಲ್ಲಿಯೇ ಇದು ಬರೆಯಲ್ಪಟ್ಟಿತು. ಈ ಸತ್ಯವೇದವು ರೋಮನ್ ಕೆಥೋಲಿಕ್ ದೇವಾಲಯಗಳಲ್ಲಿ ಉಪಯೋಗಿಸಲು ಸ್ವೀಕೃತವಾಯಿತು. ಈಗಲೂ ಕೆಲವು ಸಭೆಗಳಲ್ಲಿ ಈ ಸತ್ಯವೇದವನ್ನೇ ಉಪಯೋಗಿಸುತ್ತಿದ್ದಾರೆ.

ಮುಂದುವರಿಯುವದು...

**ಸಹೋ॥ ಎಲಿಜಬೆತ್ ಸುನಿಲ್ ಡಿ'ಸೋಜಾ.**


## ಬೇಕಾಗಿದ್ದಾರೆ

**ದುಬೈಯಲ್ಲಿ ಮನೆಕೆಲಸ ಮಾಡಲು**

**ಇಬ್ಬರು ಹೆಂಗಸರು ಬೇಕಾಗಿದ್ದಾರೆ.**

ಆಸಕ್ತಿಯುಳ್ಳವರು PASS PORTನೊಂದಿಗೆ
ಕೂಡಲೇ ಸಂಪರ್ಕಿಸಬೇಕಾದ

**ದೂರವಾಣಿ ಸಂಖ್ಯೆ 9902334941, 9844265602, 08202589070.**


ನಮ್ಮ ಮನಸ್ಸು ಯೆಹೋವನಿಗೋಸ್ಕರ ಕಾದಿದೆ; ನಮ್ಮ ಸಹಾಯವೂ ಗುರಾಣಿಯೂ ಆತನೇ
(ಕೀರ್ತ. 33:20).

# ಸಮರ್ಪಣೆಯ ಅಗತ್ಯವಿದೆ

ಕರ್ತನಾದ ಯೇಸುಕ್ರಿಸ್ತನ ಸುಮಧುರವಾದ ನಾಮದಲ್ಲಿ ನಿಮ್ಮೆಲ್ಲರಿಗೂ ವಂದನೆಗಳು.

ಪ್ರಿಯರೇ, ನಾವು ಪ್ರಪಂಚದೊಳಗೆ ಕಳುಹಿಸಲ್ಪಟ್ಟಿದ್ದೇವೆ ಎಂಬುದು ಸತ್ಯ ಸಂಗತಿಯಾಗಿದೆ ಆದರೆ ನಾವು ಕ್ರಿಸ್ತನಿಗಾಗಿ ಮಾರಲ್ಪಡದ ಹೊರತು ಆತನ ಕಾರ್ಯಗಳು ನಮ್ಮಲ್ಲಿ ಪ್ರಕಟವಾಗಲು ಸಾಧ್ಯವಿಲ್ಲ.

**"ನಿಮಗೆ ನಿಜನಿಜವಾಗಿ ಹೇಳುತ್ತೇನೆ, ಗೋಧಿಯ ಕಾಳು ಭೂಮಿಯಲ್ಲಿ ಬಿದ್ದು ಸಾಯದಿದ್ದರೆ ಒಂದೇಯಾಗಿ ಉಳಿಯುವದು; ಸತ್ತರೆ ಬಹಳ ಫಲಕೊಡುವದು"** (ಯೋಹಾ. 12:24). ಇಂದು ಅನೇಕರಿಗೆ ಸಾಯುವುದಕ್ಕೆ ಮನಸ್ಸಿಲ್ಲ ಎಂಬುದು ನಿಜ ಇನ್ನು ಎಲ್ಲಿಯಪ್ಪ ದೇವರ ಫಲಕಾಣಲು ಸಾಧ್ಯ? ಕ್ರಿಸ್ತನೊಂದಿಗೆ ಶಿಲುಬೆಗೆ ಹಾಕಿಸಿಕೊಂಡವನಾಗಿದ್ದೇನೆ; **ಇನ್ನು ಜೀವಿಸುವವನು ನಾನಲ್ಲ, ಕ್ರಿಸ್ತನು ನನ್ನಲ್ಲಿ ಜೀವಿಸುತ್ತಾನೆ.......** (ಗಲಾ. 2:20). ಕ್ರಿಸ್ತನು ನಿನ್ನಲ್ಲಿ ಜೀವಿಸುವುದಾದರೆ ಹಣವೋ, ಅಂತಸ್ತೋ, ಸ್ಥಾನವೋ, ಮಾನವೋ, ಪ್ರಸಿದ್ಧಿಯೋ ಇದಕ್ಕಾಗಿ ನಿನ್ನ ಬದುಕಲ್ಲ ಯೇಸುಗಾಗಿಯೇ ಇರುತ್ತದೇ ನಿನ್ನ ಬದುಕು.

**ನನಗೆ ಲಾಭವಾಗಿದ್ದಂಥವುಗಳನ್ನು ಕ್ರಿಸ್ತನ ನಿಮಿತ್ತ ನಷ್ಟವೆಂದೆಣೆಸಿದ್ದೇನೆ. ಇಷ್ಟೇ ಅಲ್ಲದೆ, ನನ್ನ ಕರ್ತನಾದ ಕ್ರಿಸ್ತ ಯೇಸುವನ್ನರಿಯುವದೇ ಅತಿ ಶ್ರೇಷ್ಠವಾದದ್ದೆಂದು ತಿಳಿದು ನಾನು ಎಲ್ಲವನ್ನು ನಷ್ಟವೆಂದೆಣೆಸುತ್ತೇನೆ. ಆತನ ನಿಮಿತ್ತ ನಾನು ಎಲ್ಲವನ್ನೂ ಕಳಕೊಂಡು ಅದನ್ನು ಕಸವೆಂದೆಣೆಸುತ್ತೇನೆ. ಇದರಲ್ಲಿ ನನ್ನ ಉದ್ದೇಶವೇನಂದರೆ ನಾನು ಕ್ರಿಸ್ತನನ್ನು ಸಂಪಾದಿಸಿಕೊಂಡು................** (ಫಿಲಿ. 3:8–9). ಇಲ್ಲಿ ಪೌಲನಿಗೆ ಒಂದು ಹಸಿವೆ ಇತ್ತು ಅದು ಯಾವುದೆಂದರೆ ಯೇಸುವನ್ನು ಸಂಪಾದಿಸುವುದು. ಇವತ್ತು ನನ್ನ ನಿನ್ನ ಸಂಪಾದನೆ (ಸರ್ಮಪಣೆ) ಏನಾಗಿದೆ? ಹಣವೋ, ಅಂತಸ್ತೋ, ಸ್ಥಾನವೋ, ಮಾನವೋ, ಜನ ಪ್ರಸಿದ್ಧಿಯೋ?

**"ಆಗ ಎಲೀಷನು ಅವನಿಗೆ ಒಬ್ಬನು ರಥದಿಂದಿಳಿದು ಬಂದು ನಿನ್ನನ್ನು ಎದುರುಗೊಂಡದು ನನ್ನ ಜ್ಞಾನದೃಷ್ಟಿಗೆ ಕಾಣಿಸಲಿಲ್ಲವೆಂದು ನೆನಸುತ್ತೀಯೋ? ದ್ರವ್ಯ, ಬಟ್ಟೆಗಳು, ಎಣ್ಣೇಮರದ ತೋಪುಗಳು, ದ್ರಾಕ್ಷೇ ತೋಟಗಳು, ಕುರಿದನಗಳು, ದಾಸದಾಸೀಜನವು ಇವುಗಳನ್ನು ಸಂಪಾದಿಸುವದಕ್ಕೆ ಇದು ಸಮಯವೋ?"** (2 ಅರಸು. 5:26). ಇಲ್ಲಿ ಸ್ವಲ್ಪದರ ಬಾಚುವಿಕೆ ಗೆಹಜಿಯನ್ನು ಅವನ ಸಂತತಿಯನ್ನು ಪರ್ಮಂಟಾಗಿ ಕುಷ್ಠಕ್ಕೆ ನಡೆಸಿತು.

ಪ್ರಿಯರೇ, ನೀವು ತೆಗೆದುಕೊಳ್ಳುವ ನಿರ್ಧಾರ ಅದು ನಿಮ್ಮನ್ನು ರೂಪಿಸುತ್ತದೆ. ಆದುದರಿಂದ ದೇವರ ಚಿತ್ತವಿಲ್ಲದು, ದರ್ಶನವಿಲ್ಲದು, ಪ್ರಕಟಣೆಯಿಲ್ಲದು, ವಾಗ್ದಾನವಿಲ್ಲದು ಬೇಡ. ಅಂದು ಅಬ್ರಹಾಮನು ಸೊದೋಮಿನ ಅರಸನ ಮೂಲಕವಾಗಿ ದೇವಾ ಚಿತ್ತವಿಲ್ಲದೆ ಬಂದ ಆಶೀರ್ವಾದಬೇಡ, ನನಗೆ ಸಾಲೇಮಿನ ಅರಸನ ಆಶೀರ್ವಾದಬೇಕು. ಮಾನುಷಿಕವಾದ ಲೌಕಿಕ ಆಶೀರ್ವಾದಗಳಿಗಿಂತಲೂ ನನ್ನ ಸಾಲೇಮಿನ ಅರಸನಾಗಿರುವ ಕರ್ತಾದಿ ಕರ್ತನುಕೊಡುವ ರೊಟ್ಟಿ ಮತ್ತು ದ್ರಾಕ್ಷರಸವೆಂಬ ಈ ಆತ್ಮೀಕ ಆಶೀರ್ವಾದವೇ ಸಾಕು. ಅದಕ್ಕಾಗಿಂಯೇ ಮೋಶೆಂಯು ಅಂದು ಲೌಕಿಕ ಆಶೀರ್ವಾದಗಿಂತಲೂ ಸಾಲೇಮಿನ ಅರಸನ ಆತ್ಮೀಕ ಆಶೀರ್ವಾದವನ್ನು ಎದುರು ನೋಡಿದನು (ಇಬ್ರಿ. 11:25–26). ದೇವರಿಗೆ ಸ್ತೋತ್ರ. ಇವತ್ತು ನೀವು ಕರ್ತನ ಮಾತಿನಂತೆ ವಿಧೇಯರಾಗುವುದಕ್ಕೆ ಸಿದ್ಧವಾಗುವುದಾದರೆ ನಿಮ್ಮ ಕಷ್ಟ, ಇಕ್ಕಟ್ಟುಗಳ ಮಧ್ಯೆ ಪರಲೋಕವು ನಿಮ್ಮನ್ನು ಮಾಣಿಸಲು ಶಕ್ತವಾಗಿದೆ.

ಹೌದು ಪ್ರಿಯರೇ, ವೈಯಕ್ತಿಕ ಸೌವಾರ್ತಿಕತೆಯಂದರೆ ಎಲ್ಲಾ ಕ್ರೈಸ್ತರೂ ನಮ್ಮನ್ನು ಸಂಪೂರ್ಣವಾಗಿ ಸಮರ್ಪಿಸಿಕೊಳ್ಳದೆ ಹೋದರೆ, ಹಾಗೆಯೇ ಇದು ನಮ್ಮ ಜೀವಿತದ ಅವಿಭಾಜ್ಯ ಅಂಗವೆಂದು ಅರಿತುಕೊಳ್ಳದೆ ಹೋದರೆ, ನಮ್ಮ ಕೆಲಸದಲ್ಲಿ ಉತ್ತಮವಾದ ಫಲಿತಾಂಶವನ್ನು ನೋಡಲು ಸಾಧ್ಯವಿಲ್ಲ. ಯೇಸುವು ತನ್ನ ಶಿಷ್ಯರಿಗೆ **"ನನ್ನನ್ನು ಕಳುಹಿಸಿದಾತನ ಚಿತ್ತದಂತೆ ಮಾಡಿ ಆತನ ಕೆಲಸವನ್ನು ಪೂರೈಸುವದೇ ನನ್ನ ಆಹಾರವು"** (ಯೋಹಾ. 4:34). ಎಂದು ಹೇಳುವಷ್ಟರ ಮಟ್ಟಿಗೆ ತನ್ನನ್ನು ತಾನು ಸಮರ್ಪಿಸಿಕೊಂಡಿದ್ದನು. ಯೇಸುವು **"ತೀರಿತು"** ಎಂದು ಕೂಗಿ ತನ್ನನ್ನು ಕಳುಹಿಸಿದಾತನ ಕಾರ್ಯವನ್ನು ಮಾಡಿ ಪೂರೈಸುವವರೆಗೂ ಇದೇ ಆಹಾರವನ್ನು ತಿನ್ನುತ್ತಲೇ ಇದ್ದಂತಹ ಅತಿ ಶ್ರೇಷ್ಠನಾದ ವೈಯಕ್ತಿಕ ಸೌವಾರ್ತಿಕನಾಗಿದ್ದಾನೆ.

ಅಪೋಸ್ತಲನಾದ ಪೌಲನು ಸಹ ವೈಯಕ್ತಿಕ ಸೌವಾರ್ತಿಕತೆಗೆ

ಚೀಯೋನಿನಲ್ಲಿ ರಕ್ಷಣಾಕಾರ್ಯವನ್ನು ನಡಿಸಿ, ಇಸ್ರಾಯೇಲ್ಯರಿಗೆ ನನ್ನ ಮಹಿಮೆಯನ್ನು ದಯಪಾಲಿಸುವೆನು (ಯೆಶಾ. 46:13).

ಸಮರ್ಪಿತನಾಗಿದ್ದನು. ಅವನು ಯೆರೂಸಲೇಮಿನಲ್ಲಿ ಅನೇಕ ಕಷ್ಟ ಸಂಕಟಗಳಿಗೆ ಗುರಿಯಾಗುತ್ತಾನೆಂದು ಆತ್ಮನ ಮೂಲಕವಾಗಿ ಹೇಳಿಸಲ್ಪಟ್ಟನು. ಇದರಿಂದ ಅವನ ಜೊತೆ ಕೆಲಸದವರು, ಮನುಷ್ಯ ಸಹಜವಾದ ಭಾವನೆಗಳಿಂದ, ಯೆರೂಸಲೇಮಿಗೆ ಹೋಗದಂತೆ ಅವನನ್ನು ತಡೆಯಲು ಪ್ರಯತ್ನಿಸಿದರು. ಆದರೆ, ಅವರಿಗೆ ಪೌಲನು ಕೊಟ್ಟ ಉತ್ತರ ನೋಡಿ.

**"ನೀವು ಅತ್ತತ್ತು ಯಾಕೆ ನನ್ನನ್ನು ಎದೆ ಒಡಿಸುತ್ತೀರಿ? ನಾನು ಕರ್ತನಾದ ಯೇಸುವಿನ ಹೆಸರಿನ ನಿಮಿತ್ತವಾಗಿ ಯೆರೂಸಲೇಮಿನಲ್ಲಿ ಬೇಡಿ ಹಾಕಿಸಿಕೊಳ್ಳುವದಕ್ಕೆ ಮಾತ್ರವಲ್ಲದೆ ಸಾಯುವದಕ್ಕೂ ಸಿದ್ಧವಾಗಿದ್ದೇನೆ"** (ಅ.ಕೃ. 21:13). ಪೌಲನು ಈ ಕೆಲಸವನ್ನು ತನ್ನ ಪ್ರಾಣಕ್ಕಿಂತಲೂ ಬೆಲೆಯುಳ್ಳದೆಂದು ತಿಳಿದುಕೊಂಡಿದ್ದನು.

ಯಾವಾಗ ದೇವರು ಹಗೆಮಾಡುವ ವಿಷಯಗಳನ್ನು ಹಗೆಮಾಡಲು ಮತ್ತು ನಿಮ್ಮ ಸ್ವಂತ ಆಶೆಗಿಂತಲೂ ಪ್ರಾಮುಖ್ಯವಾಗಿ ದೇವರ ಚಿತ್ತವನ್ನು ನೆರವೇರಿಸುವುದು ನಿಮ್ಮ ಸಮರ್ಪಣೆಯಾಗಿದ್ದರೆ. ಕರ್ತನ ಕಾರ್ಯಗಳು ನಿಮ್ಮಲ್ಲಿ ಪ್ರಕಟವಾಗುವುದಕ್ಕೂ ಯಾವುದೇ ದೂರವಿಲ್ಲ.

ಕರ್ತನು ತಾನೇ ನಿಮ್ಮನ್ನು ಚೀಯೋನಿನಿಂದ ಹೇರಳವಾಗಿ ಆಶೀರ್ವದಿಸಲಿ.

---

## ಪ್ರಾರ್ಥನಾ ಮನವಿಗಳು

- **ವಾತಾವರಣವನ್ನು ದೇವರು ತನ್ನ ನಿಯಂತ್ರಣದಲ್ಲಿಟ್ಟುಕೊಳ್ಳುವಂತೆ ಅತಿಯಾದ ಮಳೆಯಿಂದ ಯಾವುದೇ ಹಾನಿ ಉಂಟಾಗದಂತೆ ಪ್ರಾರ್ಥಿಸಿರಿ.**
- **ಪಶ್ಚಿಮ ಬಂಗಾಳದಲ್ಲಿ ಬಿಸಿಲಿನ ಬೇಗೆಯಿಂದ ನಾಶವಾಗುತ್ತಿರುವ ಜನರನ್ನು ದೇವರು ರಕ್ಷಿಸುವಂತೆ ಅಲ್ಲಿ ಒಳ್ಳೆ ಮಳೆಯಾಗುವಂತೆ ಬಿಸಿಲಿನ ತಾಪ ಕಡಿಮೆಯಾಗುವಂತೆ ಪ್ರಾರ್ಥಿಸಿರಿ.**
- **ನಮ್ಮ ದೇಶವನ್ನು, ರಾಜ್ಯವನ್ನು ಆಳ್ವಿಕೆ ಮಾಡುತ್ತಿರುವ ಪ್ರತಿಯೊಂದು ಅಧಿಕಾರಿಗಳಿಗಾಗಿ ಅವರು ಪ್ರಾಮಾಣಿಕತೆಯಿಂದ ನಂಬಿಗಸ್ತರಾಗಿ ದೇಶವನ್ನು ಆಳ್ವಿಕೆ ಮಾಡುವಂತೆ ಪ್ರಾರ್ಥಿಸಿರಿ.**
- **ರಾಜಕೀಯದಲ್ಲಿರುವ ಎಲ್ಲಾ ಗಲಿಬಿಲಿಗಳು ನೀಗುವಂತೆ, ಸ್ಥಿರವಾದ ಸರ್ಕಾರ ಜಾರಿಗೆ ಬರುವಂತೆ, ಶಾಂತಿ ಸಮಾಧಾನ ದೇಶದಲ್ಲಿ ನೆಲೆಸುವಂತೆ ಪ್ರಾರ್ಥಿಸಿರಿ.**
- **ನಮ್ಮ ರಾಜ್ಯದಲ್ಲಿ ದೇಶದಲ್ಲಿ ಸೇವೆಮಾಡುತ್ತಿರುವ ಪ್ರತಿಯೊಂದು ಸೇವಕರನ್ನು, ಸೇವಯನ್ನು, ಸಭೆಯನ್ನು ಕರ್ತನು ಆಶೀರ್ವದಿಸುವಂತೆ ಸೇವೆಗೆ ವಿರುದ್ಧವಾಗಿರುವ ಎಲ್ಲಾ ತಡೆಗಳು ನೀಗುವಂತೆ ಪ್ರಾರ್ಥಿಸಿರಿ. (ಮೀಕ. 2:13).**

---

## ಡಿಜಿಎಮ್ ಬೇತೇಲ್ ಅಂಕಣ

- **ಪಾ॥ ಸುನಿಲ್ ಡಿ'ಸೋಜಾರವರು ಕುಟುಂಬವಾಗಿ ದೇಶವಿದೇಶಗಳಲ್ಲಿ ಕರ್ತನ ಸೇವೆಯನ್ನು ಮಾಡಿ ಹಿಂತಿರುಗಿದ್ದಾರೆ.**
- **ಸಹೋ॥ ರೀಮಾ ಮತ್ತು ಸಹೋ॥ ರೂಬೇನ್‌ರವರಿಗೆ ದೇವರು ದಾನವಾಗಿ ಹೆಣ್ಣು ಮಗುವನ್ನು ಅನುಗ್ರಹಿಸಿದ್ದಾನೆ.**
- **ಪಾಸ್ಟರ್ ದೇವರಾಜ್ ಮತ್ತು ಸಹೋ॥ ಸವಿತಾರವರಿಗೆ ದೇವರು ದಾನವಾಗಿ ಗಂಡು ಮಗುವನ್ನು ದಯಪಾಲಿಸಿದ್ದಾನೆ.**

ಯೆಹೋವನೇ, ನೀನು ಒಳ್ಳೆಯವನೂ ಕ್ಷಮಿಸುವವನೂ ನಿನಗೆ ಮೊರೆಯಿಡುವವರೆಲ್ಲರಲ್ಲಿ ಕೃಪಾಪೂರ್ಣನೂ ಆಗಿದ್ದೀಯಲ್ಲಾ (ಕೀರ್ತ. 86:15).

# ಪ್ರಾರ್ಥನಾ ಸ್ವರ

ನಿಮ್ಮ ಸಮಸ್ಯೆಗಳಿಗಾಗಿಯೂ, ನಿಮ್ಮ ತೊಂದರೆ ಗಳಿಗಾಗಿಯೂ, ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿಸಿ ಅಥವಾ ಕರೆ ಮಾಡಿ.

ನಮ್ಮ ಪ್ರಾರ್ಥನಾ ವೀರರು ನಿಮಗಾಗಿ ಕಣ್ಣೀರು ಸುರಿಸಿ ಪ್ರಾರ್ಥಿಸುವರು. ದೇವರು ಪ್ರಾರ್ಥನೆಯನ್ನು ಕೇಳಿ ಸದುತ್ತರವನ್ನು ಅನುಗ್ರಹಿಸಿ, ನಿಮ್ಮನ್ನು ನಿಮ್ಮ ಸಮಸ್ಯೆಯಿಂದ ಬಿಡಿಸುವನು.

ನಿಮ್ಮ ಪ್ರಾರ್ಥನಾ ಮನವಿಗಳನ್ನು, ನಿಮ್ಮ ವೈಯಕ್ತಿಕ ಸಮಸ್ಯೆಗಳನ್ನು ನಾವು ಗೋಪ್ಯವಾಗಿ ಇಡುತ್ತೇವೆ. ನಿಮ್ಮ ಪ್ರಶ್ನೆಗಳಿಗೆ ನಮ್ಮ ವಿಶೇಷ ಆಲೋಚಕರು ಉತ್ತರಿಸುತ್ತಾರೆ ಹಾಗೂ ಅದನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. (ಬರಹಗಾರರ ಅನುಮತಿಯ ಮೇರೆಗೆ)

**24 ಗಂಟೆಗಳ ಪ್ರಾರ್ಥನೆಗಾಗಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ : 9945710676, 9242649814**

## ಓದುಗರಿಗೆ ವಿಶೇಷ ಸೂಚನೆ :

1. ಪ್ರೀತಿಯ ಓದುಗರೆಲ್ಲರಿಗೂ ತಿಳಿಯ ಪಡಿಸುವುದೇನೆಂದರೆ ತಾವುಗಳು ಡಿ.ಡಿ./ಚೆಕ್ಕುಗಳು ಯಾವುದನ್ನು ನಮ್ಮ ಸೇವೆಗೆ ಕಳುಹಿಸಲು ಬಯಸುವುದಾಗಿದ್ದಲ್ಲಿ ದಯಮಾಡಿ ರಿಜಿಸ್ಟರ್ ಪೋಸ್ಟ್ ಮೂಲಕ ಕಳುಹಿಸಲು ವಿನಂತಿಸುತ್ತೇವೆ. ಇದಕ್ಕಿಂತ ಮುಂಚೆ ಕೆಲವು ಪತ್ರಗಳು ನಮಗೆ ಸಿಗದೆ ಇರುವ ಕಾರಣ ತಮಗೆಲ್ಲರಿಗೂ ಈ ಸಲಹೆಯನ್ನು ಕೊಡಲು ಬಯಸುತ್ತೇವೆ.
2. ತಮಗೆ ಪ್ರತಿ ತಿಂಗಳು ನಮ್ಮ ದೇವರ ಸ್ವರ ಮಾಸಿಕ ಪತ್ರಿಕೆ ತಲುಪುತ್ತಾ ಇರಬಹುದು. ಆದರೆ ಅದಕ್ಕೆ ವಾರ್ಷಿಕ ದೇಣಿಗೆ ರೂ. 120/-ನ್ನು ಕೊಟ್ಟು ಚಂದಾದಾರರಾಗಿರದಿದ್ದಲ್ಲಿ ದಯಮಾಡಿ ತಮ್ಮ ಪರವಾದ ವಾರ್ಷಿಕ ರೂ. 120/- ಮನಿಯಾರ್ಡರ್ /ಡಿಡಿ ಮೂಲಕ ಕಳುಹಿಸಿ ನಿಮ್ಮ ಹೆಸರನ್ನು ನೋಂದಾಯಿಸಿಕೊಳ್ಳಿ ಹಾಗೂ ನಿಮ್ಮ ವಿಳಾಸವನ್ನು ಮನಿಯಾರ್ಡರ್ ಸಂದೇಶ ಭಾಗದಲ್ಲಿ ಪಿನ್‌ಕೋಡ್ ಸಮೇತ ದಯವಿಟ್ಟು ನಮಗೆ ಬರೆದು ಕಳುಹಿಸಿ.
3. ತಮಗೆ ಪ್ರತಿ ತಿಂಗಳು ಸಮಯಕ್ಕೆ ಸರಿಯಾಗಿ ನಮ್ಮ ದೇವರ ಸ್ವರ ಮಾಸಿಕ ಪತ್ರಿಕೆ ಸಿಗದಿದ್ದಲ್ಲಿ ದಯಮಾಡಿ ನಮ್ಮ ಗಮನಕ್ಕೆ ತರಬೇಕಾಗಿ ಕೇಳಿಕೊಳ್ಳುತ್ತೇವೆ.
4. ಈ ಪತ್ರಿಕೆಯ ಯಾವುದೇ ಸಲಹೆ ಮತ್ತು ಸೂಚನೆಗಳನ್ನು ಕೊಡಬಯಸುವವರು ನಮ್ಮ ವಿಳಾಸಕ್ಕೆ ಬರೆದು ಕಳುಹಿಸಿ.
5. ನಿಮ್ಮ ವಿಳಾಸವು ಬದಲಾವಣೆ ಹೊಂದಿರುವುದಾದರೆ ನಿಮ್ಮ ಈಗಿನ ವಿಳಾಸವನ್ನು ಕಳುಹಿಸಿ ಕೊಡಿರಿ.
6. ನಿಮ್ಮ ವಿಳಾಸಕ್ಕೆ ಎರಡು ಪುಸ್ತಕಗಳು ಬರುತ್ತಿದ್ದರೆ ಅದನ್ನು ನಮ್ಮ ಗಮನಕ್ಕೆ ತರಬೇಕಾಗಿ ಕೇಳಿಕೊಳ್ಳುತ್ತೇವೆ.

## ಪ್ರಿಯ ವಾಚಕರ ಗಮನಕ್ಕೆ...

"ದೇವರ ಸ್ವರ" ಮಾಸ ಪತ್ರಿಕೆಯು ಅಂದರೆ ಜುಲೈ 2012ನೇ ಸಂಚಿಕೆಯು ಈಗಾಗಲೇ ನಿಮ್ಮ ಕೈ ಸೇರಿದೆ. ಅದಕ್ಕಾಗಿ ದೇವರಿಗೆ ಸ್ತೋತ್ರ. ನಿಮ್ಮ ಪ್ರಾರ್ಥನೆಯಲ್ಲಿ ಈ ಪತ್ರಿಕೆಗಾಗಿಯೂ ಹಾಗೂ ಇದರ ಮೂಲಕ ನಿಮ್ಮಂತಹ ಸಾವಿರಾರು ಜನರು ಆಶೀರ್ವದಿಸಲ್ಪಡಲು ಪ್ರಾರ್ಥಿಸಿ ಮತ್ತು ಇತರರಿಗೆ ಇದನ್ನು ಪರಿಚಯಿಸಿರಿ. ವಾರ್ಷಿಕ ಚಂದಾ ರೂಪಾಯಿ 120/- ವರ್ಷಕ್ಕೆ.

ಸಂಪಾದಕರು

**ನಮ್ಮ ವಿಳಾಸ :**
ಸಂಪಾದಕರು, ದೇವರ ಸ್ವರ, ಬೇತೇಲ್ ಚರ್ಚ್,
ಯೇಸುಪುರ, ಶಂಕರಪುರ ಪೋಸ್ಟ್, ಉಡುಪಿ - 574 115
ಕರ್ನಾಟಕ, ಭಾರತ.
e: Editor_voiceofgod@hotmail.com
Website : www.divinegen.org

**ನಮ್ಮ ಕಛೇರಿ ವಿಳಾಸ :**
ಡಿಜಿಎಂ ಬೇತೇಲ್ ಕಛೇರಿ,
ಬೇತೇಲ್ ಚರ್ಚ್, ಯೇಸುಪುರ,
ಶಂಕರಪುರ ಅಂಚೆ, ಉಡುಪಿ – 574115,
ಕರ್ನಾಟಕ, ಭಾರತ. Ph: (0820) 2589070, 2002781
E-mial: dgmofficial@gmail.com

# ಸ್ಥಳೀಯ ಮತ್ತು ವಿದೇಶ ಸುದ್ದಿ

- ಸತ್ತ 88 ವರ್ಷಗಳ ಬಳಿಕ ಲೆನಿನ್ ಶವ ದಫನ ಸೋವಿಯತ್ ಯೂನಿಯನ್ ರಶ್ಯ ಸ್ಥಾಪಕ ವ್ಲಾದಿಮೀರ್ ಲೆನಿನ್ ನಿಧನ ಹೊಂದಿದ 88 ವರ್ಷಗಳ ಬಳಿಕ ಅವರ ಪಾರ್ಥಿವ ಶರೀರದ ದಫನ ಮಾಡಲು ರಶ್ಯ ಸಿದ್ಧತೆ ನಡೆಸಿದೆ ಎನ್ನಲಾಗಿದೆ. ಈ ಹಿಂದಿನ ಯುಎಸ್ಎಸ್ಆರ್ ವಿಭಜನೆಗೊಂಡ ಎರಡು ದಶಕಗಳಿಂದ ಕ್ರಾಂತಿಕಾರಿ ಲೆನಿನ್ ಅವರ ಪ್ರಾರ್ಥಿವ ಶರೀರವನ್ನು ಮಾಸ್ಕೋದ ರೆಡ್ ಸ್ಕ್ವೇರ್‌ನಲ್ಲಿ ಸಾರ್ವಜನಿಕ ಪ್ರದರ್ಶನಕ್ಕಿರಿಸಲಾಗಿದೆ.
- ಅಂಚೆ ಮೂಲಕ ಸಕಾಲ ಮಾಹಿತಿ ಬಹುನಿರೀಕ್ಷಿತ 'ಸಕಾಲ' ಅಡಿ ದಾಖಲೆ ಹಾಗೂ ಶುಲ್ಕದ ಅವಶ್ಯಕತೆ ಇಲ್ಲದೆ ನಾಗರೀಕ ಸೇವಾ ಮಾಹಿತಿಯನ್ನು ನೋಂದಾಯಿತ ಅಂಚೆ ಮೂಲಕ ಮನೆ ಬಾಗಿಲಿಗೆ ತಲುಪಿಸಲು ಸರ್ಕಾರ ನಿರ್ಧರಿಸಿದೆ.
- ಜಪಾನ್‌ನಿಂದ ಅಮೆರಿಕಕ್ಕೆ ತೇಲಿ ಹೋದ ಹಡಗುಕಟ್ಟೆ ಕಳೆದ ವರ್ಷ ಅಪ್ಪಳಿಸಿದ ಸುನಾಮಿ ಜಪಾನ್‌ನಿಂದ ಒಂದು ದೊಡ್ಡ ಹಡಗುಕಟ್ಟೆಯನ್ನೇ ಅಮೆರಿಕ ತನಕ ಒಯ್ದಿದೆ. ಅಮೆರಿಕದ ಒರೆಗಾನ್ ಕಡಲ ತೀರವನ್ನು ತಲುಪಿರುವ ಈ ಹಡಗುಕಟ್ಟೆ ಸುನಾಮಿ ಒಯ್ದಿರುವ ಅತಿದೊಡ್ಡ ವಸ್ತು ಎನ್ನಲಾಗುತ್ತಿದೆ.
- ಶುಕ್ರ ಸಂಕ್ರಮ ಖಗೋಲ ವೀಕ್ಷಕರಿಗೆ ಸಂಭ್ರಮ ಸೂರ್ಯ, ಭೂಮಿ ಮತ್ತು ಶುಕ್ರ ಗ್ರಹ ಸರಳ ರೇಖೆಯಲ್ಲಿ ಬಂದು ಉಂಟಾದ ಅಪೂರ್ವ ಖಗೋಲ ಚಮತ್ಕಾರ ಶುಕ್ರ ಸಂಕ್ರಮವನ್ನು ಜಗತ್ತಿನಾದ್ಯಂತವಿರುವ ಖಗೋಲ ವೀಕ್ಷಣಾಸಕ್ತರು ಕಣ್ತುಂಬಿಕೊಂಡು ಸಂಭ್ರಮಿಸಿದರು. ಬದುಕಿನಲ್ಲಿ ಒಮ್ಮೆ ಮಾತ್ರ ಕಾಣಸಿಗುವ ಈ ಅಪೂರ್ವ ವಿದ್ಯಮಾನವನ್ನು ವೀಕ್ಷಿಸುವ ಸಲುವಾಗಿ ಆಸಕ್ತರು ತುದಿಗಾಲಲ್ಲಿ ನಿಂತಿದ್ದರು. ಮುಂದಿನ ಶುಕ್ರ ಸಂಕ್ರಮ ಸಂಭವಿಸುವುದು ವರ್ಷಗಳ ಬಳಿಕ.
- ಬಿಸಿಲ ಝಳ : 100ಕ್ಕೂ ಹೆಚ್ಚು ಬಲಿ ಪಶ್ಚಿಮ ಬಂಗಾಲದಲ್ಲಿ ಬಿಸಿಲ ಝಳದಿಂದ ಬಸವಳಿದ ಸುಮಾರು 100ಕ್ಕೂ ಹೆಚ್ಚುಮಂದಿ ಕಳೆದೊಂದು ವಾರದಲ್ಲಿ ಅಸು ನೀಗಿದ್ದಾರೆ. 8 ಮಂದಿ ಸಾವಿಗೀಡಾಗಿದ್ದಾರೆ. ಮಡಿದವರಲ್ಲಿ ಬಹಳಷ್ಟು ಮಂದಿ ದುರ್ಗಾಪುರದ ಅಸುಪಾಸಿನವರು.
- ಅಸ್ಸಾಂ : ದೈತ್ಯ ಜೇಡ ಕಚ್ಚಿ ಇಬ್ಬರ ಸಾವು : ಮೈಮೇಲೆ ಕೂದಲುಗಳಿರುವ, ಟರಾಂಟುಲಾ ಜೇಡವನ್ನು ಹೋಲುವ ದೈತ್ಯಜೇಡಗಳು ಉತ್ತರ ಅಸ್ಸಾಂನ ತೀನ್‌ಸುಖಿಯಾ ಜಿಲ್ಲೆಯ ಸಾದಿಯಾ ಗ್ರಾಮದಲ್ಲಿ ಕಾಣಿಸಿಕೊಂಡಿದ್ದು, ಜನ ಭಯಬೀತರಾಗಿದ್ದಾರೆ.

## ವಿಶೇಷ ಪ್ರಾರ್ಥನೆ :

ಜುಲೈ–14, 2012ರಿಂದ ಪ್ರತಿ ಶನಿವಾರ ಮಧ್ಯಾಹ್ನ 3–00ರಿಂದ 6–00 ಗಂಟೆಯವರೆಗೆ ಸ್ವಸ್ಥತೆಯ ಹಾಗೂ ಬಿಡುಗಡೆಯ ಆರಾಧನೆಯನ್ನು ಸಭಾಪಾಲಕರಾದ **ಸುನಿಲ್ ಜಾನ್ ಡಿ'ಸೋಜಾ**ರವರು ಡಿಜಿಎಮ್ ಬೇತೇಲ್ ಚರ್ಚ್ ಯೇಸುಪುರ, ಶಂಕರಪುರದಲ್ಲಿ ನಡೆಸಲಿರುವರು. ಆಸಕ್ತಿಯುಳ್ಳ ಪ್ರತಿಯೊಬ್ಬರಿಗೂ ಆದರದ ಸ್ವಾಗತ. ರೋಗಿಗಳಿಗಾಗಿ ವಿಶೇಷವಾಗಿ ಪ್ರಾರ್ಥಿಸಲಾಗುವುದು. ಬನ್ನಿರಿ ಯೇಸುಕ್ರಿಸ್ತನು ಮಾಡುವ ಅದ್ಭುತಗಳನ್ನು ಹೊಂದಿಕೊಳ್ಳಿರಿ.

**"ದೆವ್ವಹಿಡಿದ ಬಹಳ ಜನರನ್ನು ಆತನ ಬಳಿಗೆ ಕರತಂದರು; ಆತನು ಮಾತು ಮಾತ್ರದಿಂದಲೇ ದೆವ್ವಗಳನ್ನು ಬಿಡಿಸಿದ್ದಲ್ಲದೆ ಮೈಯಲ್ಲಿ ನೆಟ್ಟಗಿಲ್ಲದವರೆಲ್ಲರನ್ನು ವಾಸಿಮಾಡಿದನು"** (ಮತ್ತಾ. 8:16).

***ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ :***

**9902334941, 9964070654, 9844265602.**

ಯೆಹೋವನು ಸದ್ಭಕ್ತರ ಜೀವಮಾನವನ್ನು ಲಕ್ಷಿಸುತ್ತಾನೆ
(ಕೀರ್ತ. 37:18).

ನಮ್ಮಲ್ಲಿ ಅನೇಕ ನವ-ನವೀನ ಆತ್ಮೀಕ ಉಜ್ಜೀವನ ಪುಸ್ತಕ, ಸತ್ಯವೇದ, ಹಾಡಿನ ಕ್ಯಾಸೆಟ್, ಸಿಡಿ, ವಿಸಿಡಿ, ಡಿವಿಡಿ ಹಾಗೂ ಉಡುಗೊರೆಗಳು ನಮ್ಮಲ್ಲಿ ಲಭ್ಯವಿದೆ.

# ಮಿರಾಕಲ್ - ಅಶೋಕ್ ಸಾಹಿತ್ಯ ಕೇಂದ್ರ

## ಯೇಸುಪುರ




ಅಧಿಕ ಪ್ರಮಾಣದ ಖರೀದಿಗೆ ವಿಶೇಷ ರಿಯಾಯಿತಿ ಲಭ್ಯ.

**MIRACLE - ASHOK LITERATURE CENTRE (MALC), YESUPURA**

**ಮಿರಾಕಲ್ - ಅಶೋಕ್ ಲಿಟರೇಚರ್ ಸೆಂಟರ್**

ಬೇತೇಲ್ ಚರ್ಚ್, ಯೇಸುಪುರ, ಶಂಕರಪುರ ಅಂಚೆ - 574 115, ಕರ್ನಾಟಕ, ಭಾರತ

ಧರ್ಮವು ಯಥಾರ್ಥವಂತರನ್ನು ಉದ್ಧರಿಸುವದು

(ಜ್ಞಾನೋ. 11:6).



ಕನ್ನಡ ಸಭೆಯಲ್ಲಿ ಪಾ|| ಸುನಿಲ್‌ರವರ ಸೇವೆ.

ಸೌದಿ ರಿಯಾದ್‌ನಲ್ಲಿ ರೋಗಿಗಳಿಗಾಗಿ ಪ್ರಾರ್ಥಿಸುತ್ತಿರುವ ಪಾ|| ಸುನಿಲ್

ನಾನು ಯೆಹೋವನನ್ನು ಯಾವಾಗಲೂ ನನ್ನೆದುರಿಗೇ ಇಟ್ಟುಕೊಂಡಿದ್ದೇನೆ (ಕೀರ್ತ. 16:8).

# ರೂತಳ ಪುಸ್ತಕ

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

**ಮಕ್ಕಳ ಕುರಿತು ತಂದೆ ತಾಯಿಯ ಕರ್ತವ್ಯಗಳು**

1. ಮಕ್ಕಳಿಗೆ ದೇವರ ವಾಕ್ಯವನ್ನು ಚೆನ್ನಾಗಿ ಕಲಿಸಿರಿ.
2. ಮಕ್ಕಳಿಗೆ ದೇವರ ಭಯವನ್ನು ಚೆನ್ನಾಗಿ ಕಲಿಸಿರಿ.
3. ಮಕ್ಕಳಿಗೆ ರಕ್ಷಣೆಯ ಬಗ್ಗೆ ಚೆನ್ನಾಗಿ ಕಲಿಸಿರಿ.
4. ಮಕ್ಕಳಿಗೆ ರಕ್ಷಕನ ಬಗ್ಗೆ ಚೆನ್ನಾಗಿ ಕಲಿಸಿರಿ.
5. ಮಕ್ಕಳಿಗೆ ದೇವರಿಗೂ ಹಿರಿಯರಿಗೂ ವಿಧೇಯರಾಗುವ ಕುರಿತು ಚೆನ್ನಾಗಿ ಕಲಿಸಿರಿ.
6. ಮಕ್ಕಳಿಗೆ ಹಿರಿಯರಿಗೂ ಗೌರವ ಕೊಡುವುದರ ಕುರಿತು ಚೆನ್ನಾಗಿ ಕಲಿಸಿರಿ.
7. ಮಕ್ಕಳಿಗೆ ಪರಿಶುದ್ಧ ಜೀವನವನ್ನು ನಡೆಸುವುದರ ಬಗ್ಗೆ ಚೆನ್ನಾಗಿ ಕಲಿಸಿರಿ.

**1) ಮಕ್ಕಳಿಗೆ ದೇವರ ವಾಕ್ಯವನ್ನು ಚೆನ್ನಾಗಿ ಕಲಿಸಿರಿ : "ನಾನು ಈಗ ನಿಮಗೆ ತಿಳಿಸುವ ಮಾತುಗಳು ನಿಮ್ಮ ಹೃದಯದಲ್ಲಿರಬೇಕು. ಇವುಗಳನ್ನು ನಿಮ್ಮ ಮಕ್ಕಳಿಗೆ ಅಭ್ಯಾಸಮಾಡಿಸಿ ಮನೆಯಲ್ಲಿ ಕೂತಿರುವಾಗಲೂ ದಾರಿನಡೆಯುವಾಗಲೂ ಮಲಗುವಾಗಲೂ ಏಳುವಾಗಲೂ ಇವುಗಳ ವಿಷಯದಲ್ಲಿಮಾತಾಡಬೇಕು. ಇವುಗಳನ್ನು ಜ್ಞಾಪಕಾರ್ಥವಾಗಿ ಕೈಗೆ ಕಟ್ಟಿಕೊಳ್ಳಬೇಕು. ಇವು ಹಣೆಗೆ ಕಟ್ಟಿಕೊಳ್ಳುವ ಜ್ಞಾಪಕದ ಪಟ್ಟಿಯಂತೆ ಇರಬೇಕು. ನಿಮ್ಮ ಮನೆ ಬಾಗಿಲಿನ ನಿಲುವು ಪಟ್ಟಿಗಳಲ್ಲಿಯೂ ತಲೆ ಬಾಗಿಲುಗಳ ಮೇಲೆಯೂ ಇವುಗಳನ್ನು ಬರೆಯಬೇಕು"**(ಧರ್ಮೋ. 6:6–9). **"ನೀವು ಮನೆಯಲ್ಲಿರುವಾಗಲೂ ಪ್ರಯಾಣದಲ್ಲಿರುವಾಗಲೂ ಮಲಗುವಾಗಲೂ ಏಳುವಾಗಲೂ ಇವುಗಳ ವಿಷಯದಲ್ಲಿ ಮಾತಾಡುತ್ತಾ ನಿಮ್ಮ ಮಕ್ಕಳಿಗೆ ಇವುಗಳನ್ನು ಅಭ್ಯಾಸಮಾಡಿಸಬೇಕು"** (ಧರ್ಮೋ. 11:19).

ನಿಮ್ಮ ಮಕ್ಕಳು ಚಿಕ್ಕದಾಗಿರುವಾಗಲೇ ದೇವರ ವಾಕ್ಯವನ್ನು ಚೆನ್ನಾಗಿ ಕಲಿಸಿರಿ. ಕರ್ತನಾದ ಯೇಸುಕ್ರಿಸ್ತನು ಚಿಕ್ಕಂದಿನಿಂದಲೇ ದೇವರ ವಾಕ್ಯವನ್ನು ಕಲಿತಿದ್ದನು. ಲೂಕ. 2:46–47 **"ಮೂರು ದಿನದ ಮೇಲೆ ಆತನನ್ನು ದೇವಾಲಯದಲ್ಲಿ ಕಂಡರು. ಆತನು ಬೋಧಕರ ನಡುವೆ ಕುಳಿತುಕೊಂಡು ಅವರ ಉಪದೇಶವನ್ನು ಕೇಳುತ್ತಾ ಪ್ರಶ್ನೆ ಮಾಡುತ್ತಾ ಇದ್ದನು. ಆತನು ಆಡಿದ ಮಾತುಗಳನ್ನು ಕೇಳಿದವರೆಲ್ಲರೂ ಆತನ ಬುದ್ಧಿಗೂ ಉತ್ತರಗಳಿಗೂ ಆಶ್ಚರ್ಯಪಟ್ಟರು"**. ಲೂಕ. 2:52 **"ಯೇಸು ಜ್ಞಾನದಲ್ಲಿಯೂ ದೇಹಬಲದಲ್ಲಿಯೂ ವೃದ್ಧಿಯಾಗುತ್ತಾ ಬಂದನು; ಇದಲ್ಲದೆ ದೇವರ ಮತ್ತು ಮನುಷ್ಯರ ದಯೆಯು ಆತನ ಮೇಲೆ ಹೆಚ್ಚಾಗುತ್ತಾ ಬಂತು"**. ಕರ್ತನಾದ ಯೇಸುಕ್ರಿಸ್ತನು ಈ ಲೋಕದಲ್ಲಿ ಮನುಷ್ಯನಾಗಿ ಹುಟ್ಟಿ ಬಂದಾಗ ಮರಿಯ ಯೋಸೇಫರು ಆತನಿಗೆ ದೇವರ ವಾಕ್ಯವನ್ನು ಚೆನ್ನಾಗಿ ಕಲಿಸಿದ್ದರು. ಇದರಿಂದಾಗಿ ದೇವರ ವಾಕ್ಯದ ಜ್ಞಾನದಲ್ಲಿ ಆತನು ಬೆಳೆದು ಅಭಿವೃದ್ಧಿಯಾಗಿ ಎಲ್ಲರೂ ಆಶ್ಚರ್ಯ ಪಡುವ ರೀತಿಯಲ್ಲಿ ದೇವರ ಸೇವೆಯನ್ನು ಮಾಡಿದನು.

ಭಕ್ತನಾದ ತಿಮೊಥೆಯನ ಬಳಿ ಪೌಲನು ತನ್ನ ಪತ್ರಿಕೆಯಲ್ಲಿ ಬರೆಯುವಾಗ **"ನೀನಾದರೋ ಕಲಿತು ದೃಢವಾಗಿ ನಂಬಿದ ಬೋಧನೆಗಳಲ್ಲಿ ನೆಲೆಯಾಗಿರು. ಕಲಿಸಿಕೊಟ್ಟವರು ಯಾರೆಂಬದನ್ನು ಆಲೋಚಿಸು. ಚಿಕ್ಕಂದಿನಿಂದಲೂ ನಿನಗೆ ಪರಿಶುದ್ಧಗ್ರಂಥಗಳ ಪರಿಚಯವಾಯಿತಲ್ಲಾ. ಆ ಗ್ರಂಥಗಳು ಕ್ರಿಸ್ತ ಯೇಸುವಿನಲ್ಲಿರುವ ನಂಬಿಕೆಯ ಮೂಲಕ ರಕ್ಷಣೆಹೊಂದಿಸುವ ಜ್ಞಾನವನ್ನು ಕೊಡುವದಕ್ಕೆ ಶಕ್ತವಾಗಿವೆ. ದೈವಪ್ರೇರಿತವಾದ ಪ್ರತಿಯೊಂದು ಶಾಸ್ತ್ರವು ಉಪದೇಶಕ್ಕೂ ಖಂಡನೆಗೂ ತಿದ್ದುಪಾಟಿಗೂ ನೀತಿಶಿಕ್ಷೆಗೂ ಉಪಯುಕ್ತವಾಗಿದೆ ಆದುದರಿಂದ ದೇವರ ಮನುಷ್ಯನು ಪ್ರವೀಣನಾಗಿ ಸಕಲಸತ್ಕಾರ್ಯಕ್ಕೆ ಸನ್ನದ್ಧನಾಗುವನು"** (2 ತಿಮೊ. 3:14–17) ಚಿಕ್ಕಂದಿನಿಂದ ದೇವರ ವಾಕ್ಯವನ್ನು ಅಭ್ಯಾಸ ಮಾಡಿದಂಥ ತಿಮೊಥಿಯನು ಒಂದು ದಿನ ದೇವರ ಸೇವಕನಾಗಿ ಬದಲಾದನು ಇದಕ್ಕೆ ಒಂದೇ ಒಂದು ಕಾರಣ ಕ್ರೈಸ್ತ ನಂಬಿಕೆಯಲ್ಲಿದ್ದ ತಿಮೊಥೆಯನ ಅಜ್ಜಿ ಲೋವಿ ಹಾಗೂ ತಾಯಿ ಯೂನೀಕೆಯಾಗಿದ್ದರು (2 ತಿಮೊ. 1:5). ನನ್ನ ಪ್ರಿಯ ತಂದೆ ತಾಯಿ ಹಾಗೂ ಹಿರಿಯರ ತಿಮೊಥೆಯನ ತಾಯಿ ಹಾಗೂ ಅಜ್ಜಿ ಮತ್ತು ಯೇಸುಕ್ರಿಸ್ತನ ಪೋಷಕರಾದ ಯೋಸೇಫ ಮರಿಯರು ತಮ್ಮ ಮಕ್ಕಳು ಚಿಕ್ಕದಿರುವಾಗಲೇ ದೇವರ ವಾಕ್ಯ ಕಲಿಸಿ ಅದರಲ್ಲಿ ನಡೆಸಿದರು ಇದರಿಂದಾಗಿ ಅವರು ಪ್ರಸಿದ್ಧ ದೇವರ ಸೇವೆ ಮಾಡಲು ಕಾರಣವಾಯಿತು. ನಿಮ್ಮ ಮಕ್ಕಳ ಕುರಿತು ಇಂದಿನಿಂದ ಒಂದು ತೀರ್ಮಾನ ತೆಗೆದುಕೊಳ್ಳಿ. ಪ್ರತಿದಿನ ನನ್ನ ಮಕ್ಕಳಿಗೆ ದೇವರ ವಾಕ್ಯವನ್ನು ಕಲಿಸಿ ಬೆಳೆಸುತ್ತೇನೆಂದು ನಿಶ್ಚಯವಾಗಿ ನಿಮ್ಮ ಮಕ್ಕಳನ್ನು ಕರ್ತನು ಆಶೀರ್ವದಿಸುವನು. **"ಯಾವನು ದುಷ್ಟರ ಆಲೋಚನೆಯಂತೆ ನಡೆಯದೆ ಪಾಪಾತ್ಮರ**

ಒಂದು ಕಾಲ ಉಂಟು, ನಿನ್ನ ನಿರೀಕ್ಷೆಯು ನಿರರ್ಥಕವಾಗದು

(ಜ್ಞಾನೋ. 23:18).

ಮಾರ್ಗದಲ್ಲಿ ನಿಂತುಕೊಳ್ಳದೆ ಧರ್ಮನಿಂದಕರೊಡನೆ ಕೂತುಕೊಳ್ಳದೆ ಯೆಹೋವನ ಧರ್ಮಶಾಸ್ತ್ರದಲ್ಲಿ ಆನಂದಪಡುವವನಾಗಿ ಅದನ್ನೇ ಹಗಲಿರುಳು ಧ್ಯಾನಿಸುತ್ತಿರುವನೋ ಅವನು ಎಷ್ಟೋ ಧನ್ಯನು. ಅವನು ನೀರಿನ ಕಾಲಿವೆಗಳ ಬಳಿಯಲ್ಲಿ ಬೆಳೆದಿರುವ ಮರದ ಹಾಗಿರುವನು. ಅಂಥ ಮರವು ತಕ್ಕ ಕಾಲದಲ್ಲಿ ಫಲಕೊಡುತ್ತದಲ್ಲಾ; ಅದರ ಎಲೆ ಬಾಡುವದೇ ಇಲ್ಲ. ಅದರಂತೆ ಅವನ ಕಾರ್ಯವೆಲ್ಲವೂ ಸಫಲವಾಗುವದು" (ಕೀರ್ತ. 1:1–3).

ಕರ್ತನು ಚೀಯೋನಿನಿಂದ ಹೇರಳವಾಗಿ ಆಶೀರ್ವಾದಿಸಲಿ.

ಕರ್ತನ ಸೇವೆಯಲ್ಲಿ ಪ್ರಯಾಸಪಡುತ್ತಿರುವ ಮತ್ತು ನಿಮ್ಮೆಲ್ಲರ ಪ್ರೀತಿಗೆ ಪಾತ್ರಳಾದ ಕ್ರಿಸ್ತನ ದಾಸಿಯಾದ,

**– ಸಹೋ॥ ಎಲಿಜಬೆತ್ ಸುನಿಲ್ ಡಿ'ಸೋಜಾ.**

---

## ಜೀವನ ಎಂದರೇನು? ಪ್ರಧಾನವಾದ ಪಂಚ ಜೀವಿತಗಳಾವುವು?

**"ಜೀವನ ಎಂದರೆ ನಮ್ಮ ಅಗತ್ಯಗಳನ್ನು ಪ್ರಮಾಣಿಕತೆಯಿಂದ, ಪರಿಶ್ರಮದೊಂದಿಗೆ ಪಡೆದುಕೊಂಡು ಸಂತೃಪ್ತಿಯಿಂದ ನಡೆಸುವುದೇ ಜೀವನ".**

**ಪಂಚ ಜೀವಿತಗಳು :**

1. ವ್ಯಕ್ತಿಗತ ಜೀವನ
2. ಕೆಲಸದ ಜೀವನ
3. ಕುಟುಂಬದ ಜೀವನ
4. ಆತ್ಮೀಕ ಜೀವನ
5. ಸಾಮಾಜಿಕ ಜೀವನ.

**ಜೀವನ ಮತ್ತು ಪಂಚ ಜೀವಿತದ ಸಾರ್ಥಕತೆಯ ನೀತಿ ಸೂತ್ರಗಳು**

**ಜೀವನದ ನೀತಿ ಸೂತ್ರಗಳು :**

1. ಗುಣವಿಲ್ಲದಿದ್ದರೆ ರೂಪ – ವ್ಯರ್ಥ
2. ನಮ್ರತೆ ಇಲ್ಲದಿದ್ದರೆ – ವಿದ್ಯೆ ವ್ಯರ್ಥ
3. ಉಪಯೋಗಿಸದಿದ್ದರೆ _ ಧನ ವ್ಯರ್ಥ
4. ಹಸಿವೆ ಇಲ್ಲದಿದ್ದರೆ – ಭೋಜನ ವ್ಯರ್ಥ
5. ಪ್ರಜ್ಞೆ ಇಲ್ಲದಿದ್ದರೆ _ ಪ್ರತಿಭೆ ವ್ಯರ್ಥ
6. ಗೌರವ ಇಲ್ಲದಿದ್ದರೆ _ ಅಧಿಕಾರ ವ್ಯರ್ಥ
7. ಕುಟಿಲವ ಬಿಡದಿದ್ದರೆ _ ಪಟನೆ ವ್ಯರ್ಥ
8. ಪಟನೆ ಮಾಡದಿದ್ದರೆ – ಗೌರವ ವ್ಯರ್ಥ
9. ಗೌರವ ಇಲ್ಲದಿದ್ದರೆ – ಪಂಚ ಜೀವಿತದ ಸಾರ್ಥಕತೆ ವ್ಯರ್ಥ
10. ಪಂಚ ಜೀವಿತದ ಸಾರ್ಥಕತೆ ಇಲ್ಲದಿದ್ದರೆ – ಸಾಧನೆಯೂ ವ್ಯರ್ಥ
11. ಸಾಧನೆಯೂ ಇಲ್ಲದಿದ್ದರೆ – ಸೃಷ್ಟಿಯೇ ವ್ಯರ್ಥ
12. ಸೃಷ್ಟಿಕರ್ತನ ಅರಿವೇ ಇಲ್ಲದಿದ್ದರೆ – ಜೀವನವೇ ವ್ಯರ್ಥ

**1. ವ್ಯಕ್ತಿಗತ ಜೀವಿತದ 12 ನೀತಿ ಸೂತ್ರಗಳು :**

1. ನಾನು ಯಾರು ಎಂದು – ತಿಳಿಯದಿದ್ದರೆ ಆತ್ಮ ವ್ಯರ್ಥ
2. ಶಿಸ್ತು ಇಲ್ಲದಿದ್ದರೆ – ಗೌರವ ಆರೋಗ್ಯ ವ್ಯರ್ಥ
3. ಆರೋಗ್ಯ ಇಲ್ಲದಿದ್ದರೆ – ಆಯಸ್ಸು ವ್ಯರ್ಥ
4. ಸಮಯ ಪಾಲನೆ ಇಲ್ಲದಿದ್ದರೆ – ದಿನಗಳು ವ್ಯರ್ಥ
5. ನಿಯಮ ಪಾಲನೆ ಇಲ್ಲದಿದ್ದರೆ – ಓಟ ವ್ಯರ್ಥ
6. ಜ್ಞಾನ ಇಲ್ಲದಿದ್ದರೆ _ ಮಾತು ವ್ಯರ್ಥ
7. ಹಣದ ಬೆಲೆ ಅರಿಯದಿದ್ದರೆ – ದುಡಿಮೆ ಶ್ರಮ ವ್ಯರ್ಥ
8. ಮಾನವೀಯತೆ ಇಲ್ಲದಿದ್ದರೆ – ಜನನವೇ ವ್ಯರ್ಥ
9. ತಲಾಂತುಗಳು ಉಪಯೋಗಿಸದಿದ್ದರೆ – ಸಂತೋಷ ವ್ಯರ್ಥ
10. ಸಮಾಧಾನ ಇಲ್ಲದಿದ್ದರೆ – ಪ್ರಯಾಸ ವ್ಯರ್ಥ
11. ಗುರಿ ಇಲ್ಲದಿದ್ದರೆ – ಸಾಧನೆ ವ್ಯರ್ಥ
12. ಯೋಜನೆ ಇಲ್ಲದಿದ್ದರೆ – ವರ್ಷಗಳು ವ್ಯರ್ಥ

ಮುಂದುವರಿಯುವದು......

– ಸಂಗ್ರಹ.

ಉತ್ಸಾಹಧ್ವನಿಯೂ ಜಯಘೋಷವೂ ನೀತಿವಂತರ ಗುಡಾರಗಳಲ್ಲಿವೆ (ಕೀರ್ತ. 118:15).